ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 4, January-February, 2024, Pp. 132-149.**
**©*IIMRD*, Mysuru**
IIMRD JOURNALS

**www.iimrd.com**

# ಕನ್ನಡ ಸಾಹಿತ್ಯ ಒಂದು ವಿಹಂಗಮ ನೋಟ

**ಡಾ. ಧನಂಜಯ ಪಾಲಹಳ್ಳಿ**
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

**ಸಾರಾಂಶ: (Abstract)**

*ರಾಷ್ಟ್ರದ ಇತರ ರಾಜ್ಯಗಳಂತೆ ಕರ್ನಾಟಕವೂ ಕೂಡ ಭಾರತ ದೇಶದ ಚರಿತ್ರೆಯನ್ನು ರೂಪಿಸುವಲ್ಲಿ ಮತ್ತು ಧರ್ಮ ದರ್ಶನ, ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅದರ ಬೆಳವಣಿಗೆಯನ್ನು ಪೋಷಿಸುವಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸಿದೆ. ಕರುನಾಡನ್ನು ಕಟ್ಟಿ ಬೆಳೆಸಿದವರು ಈ ನೆಲದ ಜನಪದರು, ಆಳಿದ ಅರಸರು ಹಾಗೂ ಕವಿಪುಂಗವರು, ಅಚ್ಚಗನ್ನಡದ ಮೊಟ್ಟ ಮೊದಲ ದೊರೆಗಳು, ಕನ್ನಡ ಸಂಸ್ಕೃತಿಯ ಉಗಮ ಪುರುಷರಾದ ಬನವಾಸಿಯ ಕದಂಬರನ್ನು ಮೊದಲುಗೊಂಡು ಮಾಳವಖೇಡದ ರಾಷ್ಟ್ರಕೂಟರು, ತಲಕಾಡಿನ ಗಂಗರೂ, ಬಾದಾಮಿಯ ಚಾಲುಕ್ಯರು, ಕಲ್ಯಾಣಿಯ ಚಾಲುಕ್ಯರು, ಕಲ್ಯಾಣಿಯ ಕಲಚೂರಿಗಳು, ದ್ವಾರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಕಿತ್ತೂರಿನ ದೇಸಾಯಿಗಳು, ಕೆಳದಿಯ ನಾಯಕರು, ಮೈಸೂರಿನ ಒಡೆಯರು, ಯಲಹಂಕದ ನಾಡಪ್ರಭುಗಳು, ದಕ್ಷಿಣ ಭಾರತದ ಇತಿಹಾಸದ ಸಾಂಸ್ಕೃತಿಕ ವೈಭವಕ್ಕೆ ತಮ್ಮದೆಯಾದ ವಿಶಿಷ್ಟ ಕೊಡುಗೆಗಳನ್ನು ನೀಡಿದ ರಾಜಮನೆತನಗಳಾಗಿವೆ. ಕವಿರಾಜಮಾರ್ಗಕಾರನನ್ನು ಮೊದಲುಗೊಂಡು ಶಿವಕೋಟ್ಯಾಚಾರ್ಯ, ಪಂಪ, ಪೊನ್ನ, ರನ್ನ, ಜನ್ನ, ನಾಗಚಂದ್ರ, ನಾಗವರ್ಮರಂತ ಪ್ರಾಚೀನ ಜೈನಕವಿಗಳು ಸೇರಿದಂತೆ ಬಸವಾದಿ ಶರಣರು, ಹರಿಹರ, ರಾಘವಾಂಕರು, ಪುರಂದರ ಕನಕಾದಿ ಹರಿದಾಸರು, ಕುಮಾರವ್ಯಾಸ–ಲಕ್ಷ್ಮೀಶ ಭಾಗವತಾದಿ ನಡುಗನ್ನಡ ಕವಿಗಳು, ಹೊಸಗನ್ನಡ ಅರುಣೋದಯದ ಮುಂಗೋಳಿ ಮುದ್ದಣ, ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಅವರನ್ನು ಒಳಗೊಂಡ ಆಧುನಿಕ ಕನ್ನಡ ಸಾಹಿತ್ಯದ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಮಹಿಳಾದಂತಹ ನವ್ಯೋತ್ತರ ಸಾಹಿತ್ಯ ಪಂಥದ ಆಧುನಿಕ ಕನ್ನಡದ ಅಸಂಖ್ಯಾತ ಕವಿ ಸಮೂಹ ಕನ್ನಡ ಸಾಹಿತ್ಯದ ಶ್ರೀಮಂತ ಬೆಳವಣಿಗೆಗೆ ಕಾರಣವಾಗಿದೆ. ಇವರೆಲ್ಲರ ಸಮೃದ್ಧ ಸ್ವಾಭಿಮಾನದ ಸಂಕೇತವೇ ನಮ್ಮ ಭವ್ಯ ಕರ್ನಾಟಕ ಇದು ಮೂರು ಸಾವಿರ ವರ್ಷಗಳ ಹಿರಿದಾದ ಪರಂಪರೆ, ಸಾವಿರದ ಐನೂರು ವರ್ಷಗಳ ಸಾಹಿತ್ಯ ಚರಿತ್ರೆಯನ್ನು ಒಳಗೊಂಡಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ, ಕನ್ನಡ ಸಾಹಿತ್ಯ ಬೆಳವಣಿಗೆ, ವಿಹಂಗಮ ನೋಟ, ಹಳೆಗನ್ನಡ, ಪ್ರಾಚೀನತೆ.

**ಪೀಠಿಕೆ**

ಕನ್ನಡ, ದಕ್ಷಿಣ ಭಾರತದ ದ್ರಾವಿಡ ಭಾಷೆಗಳಲ್ಲಿ ಒಂದಾಗಿದ್ದು, ತಮಿಳು ಭಾಷೆಯಷ್ಟೇ ಪುರಾತನವಾದ ಪ್ರಾಚೀನತೆಯನ್ನು ಹೊಂದಿದೆ. ಕನ್ನಡ ಭಾಷೆ ಲಿಖಿತವಾಗಿ ಮೊದಲು ಗೋಚರಿಸಿದ್ದು ಕ್ರಿ.ಶ.450ರಲ್ಲಿ ಹಾಸನ

*Please cite this article as: ಧನಂಜಯ ಪಾಲಹಳ್ಳಿ.* (2024). ಕನ್ನಡ ಸಾಹಿತ್ಯ ಒಂದು ವಿಹಂಗಮ ನೋಟ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ. 132–149.*

ಜಿಲ್ಲೆಯ ಬೇಲೂರು ತಾಲ್ಲೂಕಿನ ಪಲ್ಮಿಡಿಯಲ್ಲಿ ರಚನೆಯಾದ ಹಲ್ಮಿಡಿಯ ಶಿಲಾ ಶಾಸನದಲ್ಲಿ. ಈ ಶಾಸನ ವೀರಗಲ್ಲು ಶಾಸನವಾಗಿದೆ. ಬನವಾಸಿಯ ಕದಂಬರ ದೊರೆ ಕಾಕುಸ್ಥವರ್ಮನ ಕಾಲದ ಈ ಶಾಸನದಲ್ಲಿ ಸಂಸ್ಕೃತ ಪದ್ಯಗಳೇ ಹೆಚ್ಚಾಗಿದ್ದು ಕೇವಲ ಇಪ್ಪತ್ತು ಪದಗಳು ಮಾತ್ರ ಕನ್ನಡದಲ್ಲಿವೆ. ಶಾಸನದಲ್ಲಿ ಬಳಕೆಯಾಗಿರುವ ಭಾಷೆಯನ್ನು ಗಮನಿಸಿದಾಗ ಪೂರ್ವದ ಹಳಗನ್ನಡದ ಮೇಲಿನ ಸಂಸ್ಕೃತದ ಪೂರ್ಣ ಹಿಡಿತವಿರುವುದು ಗೋಚರಿಸುತ್ತದೆ. ಹಲ್ಮಿಡಿ ಶಾಸನವು ಕುಲಭೋರನ ಶತ್ರುವಾದ ಕಾಕುಸ್ಥವರ್ಮನ ಆಳ್ವಿಕೆಯ ಕಾಲದಲ್ಲಿ ನರಿದಾಳೆ ನಾಡನ್ನು ಆಳುತ್ತಿದ್ದ ದೊರೆಗಳಾದ ಮೃಗೇಶ ಮತ್ತು ನಾಗೇಂದ್ರ ಎಂಬುವವರು ಕೇಕೆಯ ಮತ್ತು ಪಲ್ಲವರ ಮೇಲೆ ಹೋರಾಡಿ ಜಯಗಳಿಸಿದ ವಿಜಿಅರಸ ಎನ್ನುವವನಿಗೆ ಪಲ್ಮಿಡಿ ಮತ್ತು ಮೂಳವಳ್ಳಿ ಎಂಬ ಗ್ರಾಮಗಳನ್ನು ಬಾಳ್ಗಚ್ಚಾಗಿ ನೀಡಿರುವುದನ್ನು ತಿರುಳಾಗಿ ಹೊಂದಿದೆ. ಸಾಂಸ್ಕೃತಿಕವಾಗಿಯೂ ಈ ಶಾಸನ ನಾಡಿನ ದಾನ ಸಂಸ್ಕೃತಿಯನ್ನು ದಾಖಲಿಸುತ್ತದೆ. ಹೆಸರಿಸಲೇ ಬೇಕಾದ ನಂತರದ ಶಾಸನಗಳೆಂದರೇ ಶ್ರವಣಬೆಳಗೊಳ ಶಾಸನ, ಬಾದಾಮಿ ಶಾಸನ ಕ್ರಿ.ಶ. 800ರ ಮಾವಳ್ಳಿ ಶಾಸನ, ಐಹೊಳೆ ಶಾಸನಗಳಾಗಿವೆ. ಕ್ರಿ.ಶ.7ನೆಯ ಶತಮಾನದ ಬಾದಾಮಿ ಶಾಸನ ಕನ್ನಡದ ಸೃಜನಶೀಲ ಅಭಿವ್ಯಕ್ತಿಯ ಪ್ರಬುದ್ಧ ನಿದರ್ಶನ. "ಅಪಕೀರ್ತಿಗಿಂತ ಮರಣವೇ ಲೇಸು" ಎಂದು ಬಗೆಯುತ್ತಿದ್ದ ಕಪ್ಪೆ ಅರಭಟ್ಟನೆಂಬ ಪುರುಷನ ಕೀರ್ತಿಯನ್ನು ಕನ್ನಡದ ತ್ರಿಪದಿಗಳಲ್ಲಿ ಹೊಗಳುವ ವೀರಗಲ್ಲಿನ ರೂಪದ ಪ್ರಾಚೀನ ಸ್ಮಾರಕ ಈ ತಟ್ಟುಕೊಟೆ ಬಾದಾಮಿ ಶಾಸನ. ಪೂರ್ವದ ಹಳಗನ್ನಡವು ಹಳಗನ್ನಡದ ಕಡೆ ಪಾದಾರ್ಪಣೆ ಮಾಡುತ್ತಿರುವುದು ಈ ಶಾಸನದಿಂದ ತಿಳಿದುಬರುತ್ತದೆ. "ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್ ಮಾಧವನನೀತನ್ಪೆರನಲ್ಲ"....

ಕ್ರಿ.ಶ.800ರ ಮಾವಳ್ಳಿ ಶಾಸನ ಕನ್ನಡ ಸಾಹಿತ್ಯ ಗುಣಗಳನ್ನು ಹೊಂದಿದ್ದ ಕಾರಣ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಆರಂಭದ ಶಾಸನಗಳು ಗದ್ಯ ರೂಪದಲ್ಲಿದ್ದರೆ 10ನೇ ಶತಮಾನದ ನಂತರದ ಶಾಸನಗಳು ಪದ್ಯ ಶಾಸನಗಳಾಗಿವೆ. ಹೀಗೆ ಕನ್ನಡ ಸಾಹಿತ್ಯ ಬೆಳವಣಿಗೆಗೆ ಶಾಸನಗಳೇ ಆರಂಭ ಮೆಟ್ಟಿಲಾದವು, ಧರ್ಮವೇ ಕನ್ನಡ ಸಾಹಿತ್ಯ ರಚನೆಗೆ ಮೂಲ ಪ್ರೇರಣೆಯಾಯಿತು.

**ಕನ್ನಡ ಸಾಹಿತ್ಯ ಚರಿತ್ರೆ ವರ್ಗೀಕರಣ**

ಧರ್ಮ ಮತ್ತು ಸಾಹಿತ್ಯ ಸ್ವರೂಪದ ಆಧಾರದ ಮೇಲೆ ಕನ್ನಡ ಸಾಹಿತ್ಯ ಚರಿತ್ರೆಯ ಬೆಳವಣಿಗೆಯನ್ನು ಹಲವು ವಿದ್ವಾಂಸರು ತಮ್ಮದೇ ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಸುಮಾರು ಸಾವಿರದ ಐದುನೂರು ವರ್ಷಗಳ ಸುದೀರ್ಘ ಸಮೃದ್ಧ ಕನ್ನಡ ಸಾಹಿತ್ಯಕ್ಕೆ ಒಂದು ಚರಿತ್ರೆಯನ್ನು ಬರೆಯುವ ಮೊದಲ ಪ್ರಯತ್ನ ಮಾಡಿದವರು. ಕೋಶದ ಖ್ಯಾತಿಯ ರೆವರೆಂಡ್ ಫರ್ಡಿನಾಂಡ್ ಕಿಟಲ್ (1875), ನಾಗವರ್ಮನ "ಛಂದೋಂಬುದಿ" ಸಂಪಾದಿತ ಗ್ರಂಥದ ಪ್ರಸ್ತಾವನೆಯಲ್ಲಿ ಆಗಿನ ಕಾಲಕ್ಕೆ ದೊರೆತಿದ್ದ ಕನ್ನಡ ಕವಿಗಳ ವಿಚಾರವನ್ನೆಲ್ಲಾ ಆಧರಿಸಿ ಕನ್ನಡ ಸಾಹಿತ್ಯ ಚರಿತ್ರೆಗೊಂದು ಸ್ಥೂಲ ರೂಪ ಕೊಡಲು ಪ್ರಯತ್ನಿಸಿದರು. ನಂತರದಲ್ಲಿ ಮೈಸೂರು ಗೆಜೆಟಿಯರ್ ನಾಗವರ್ಮ ಕರ್ನಾಟಕ ಭಾಷಾ ಭೂಷಣ, ಶಬಾನು ಶಾಸನ ಮೊದಲಾದ ಗ್ರಂಥ ಸಂಪಾದಿಸಿದ ಬಿ.ಎಲ್.ರೈಸ್ ಗ್ರಂಥ ಪ್ರಸ್ತಾವನೆಗಳಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದಿದ್ದಾರೆ. ಹಾಗೆಯೇ ಇ.ಪಿ.ರೈಸ್ ತಮ್ಮ ಕಣ್ಣ ಮುಂದಿನ ಸಾಧನೆಗಳನ್ನು ಗಮನಿಸಿ. 1915ರಲ್ಲಿ "ಹಿಸ್ಟರಿ ಆಫ್ ಕ್ಯಾನರೀಸ್ ಲಿಟರೇಚರ್" ಎಂಬ ಸಾಹಿತ್ಯ ಚರಿತ್ರೆಯೊಂದನ್ನು ಪ್ರಕಟಿಸಿದರು. ಕನ್ನಡ ಸಾಹಿತ್ಯದ

ಬೆಳವಣಿಗೆಯ ತಿಳಿಯಲು ಆರ್.ನರಸಿಂಹಾಚಾರ್ ಮೂರು ಸಂಪುಟಗಳಲ್ಲಿ ಪ್ರಕಟಿಸಿದ "ಕರ್ನಾಟಕ ಕವಿ ಚರಿತೆ" ಅಪೂರ್ವವಾದ ಆಕರ ಗ್ರಂಥವಾಗಿದೆ. ಈ ಸಂಪುಟಗಳನ್ನು ಕನ್ನಡ ಸಾಹಿತ್ಯ ಚರಿತ್ರೆ ಎಂದು ನೇರವಾಗಿ ಹೇಳಲಾಗದಿದ್ದರೂ ಸಾಹಿತ್ಯ ಚರಿತ್ರೆಯೊಂದು ರೂಪತಳೆಯಲು ಬೇಕಾದ ಆಕರ ಸಾಮಾಗ್ರಿಯನ್ನು ಒದಗಿಸುವ ಅಡಿಪಾಯವಾದವು ಎಂದು ಹೇಳಬಹುದು. ಕೆ.ವೆಂಕಟರಾಮಪ್ಪನವರ "ಕನ್ನಡ ಸಾಹಿತ್ಯ (1939)" ಎಂಬ ಕಿರು ಹೊತ್ತಿಗೆ ಸಾಹಿತ್ಯ ಚರಿತ್ರೆಯೊಂದರ ಸಮಗ್ರ ರೂಪುರೇಷೆಗಳನ್ನು ಪ್ರಥಮ ಬಾರಿಗೆ ಹೊಂದಿರುವ ಗಮನಾರ್ಹ ಕೃತಿಯಾಗಿದೆ. ಈ ಎಲ್ಲಾ ಮೇಲ್ಕಂಡವರ ಪ್ರಯತ್ನಗಳೂ ಕನ್ನಡ ಸಾಹಿತ್ಯ ಚರಿತ್ರೆಯ ಬರವಣಿಗೆಯ ಹಾದಿಯನ್ನು ನಿಚ್ಚಳಗೊಳಿಸಲು ಸಹಕಾರಿಯಾದವಾದರೂ ಈ ಎಲ್ಲಾ ಪರಿಶ್ರಮವನ್ನು ಭಟ್ಟಿಯಿಳಿಸಿ ಸಾಹಿತ್ಯ ಚರಿತ್ರೆಗೆ ಒಂದು ವ್ಯಕ್ತಿತ್ವದ ಮುದ್ರೆಯನ್ನೊತ್ತಿದ ಪ್ರಥಮ ಸಾಹಸ ಡಾ.ರಂ.ಶ್ರೀಮುಗಳಿ ಅವರ "ಕನ್ನಡ ಸಾಹಿತ್ಯ ಚರಿತ್ರೆ(1953)" ಆಗಿದೆ. ನಂತರದಲ್ಲಿ ಎಂ.ಮರಿಯಪ್ಪ ಭಟ್ಟರ "ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (1960)", ತ.ಸು.ರಾಮರಾಯ ಮತ್ತು ಮೇ. ರಾಜೇಶ್ವರಯ್ಯರ "ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ (1961)" ಈ ದಿಕ್ಕಿನಲ್ಲಿ ಇನ್ನೊಂದು ಗಮನಾರ್ಹ ಮಜಲು. ಡಾ.ಸಿ.ವೀರಣ್ಣರ "ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ" (1986 – 1, 2 & 3 ಸಂಪುಟಗಳು) ಸಾಂಸ್ಥಿಕ ಪ್ರಯತ್ನಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ "ಕನ್ನಡ ಸಾಹಿತ್ಯ ಚರಿತ್ರೆ" ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ "ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ"ಗಳನ್ನು ವಿಶೇಷವಾಗಿ ಹೆಸರಿಸಲೇಬೇಕಾಗುತ್ತದೆ. ಕಿಟ್ಟಲ್‌ರದು ಕನ್ನೆ ಪ್ರಯತ್ನ, ಚರಿತ್ರೆಯನ್ನು ಒಂದು ರೂಪಕ್ಕೆ ತರುವುದೇ ಅಲ್ಲಿನ ಕೆಲಸ. ಆರ್.ನರಸಿಂಹಾಚಾರ್ಯರದು "ಕಣಜ" ಪ್ರಯತ್ನ ಸಾಮಾಗ್ರಿಯ ಸಂಗ್ರಹಣೆಯೇ ಅವರ ಗುರಿ, ಡಾ.ರಂ.ಶ್ರೀ.ಮುಗಳಿಯರದು 'ಕಟ್ಟುವ' ಪ್ರಯತ್ನ. ಚಾರಿತ್ರಿಕ ಹಿನ್ನೆಲೆಯಲ್ಲಿ ಮೌಲ್ಯಮಾಪನ ಮಾಡುತ್ತಾ ಇತಿಹಾಸವನ್ನು ನಿರೂಪಿಸುವುದು ಅದರ ಸ್ವರೂಪ. ಡಾ.ಸಿ.ವೀರಣ್ಣರದು 'ಕೆದಕುವ' ಪ್ರಯತ್ನ ಒಂದು ವಿಶಿಷ್ಟ ದೃಷ್ಟಿಕೋನದಿಂದ ಚರಿತ್ರೆಯನ್ನು ವಿಶ್ಲೇಷಿಸುವುದು ಅದರ ಉದ್ದೇಶ. ಈ ನಾಲ್ಕು ಮಂದಿಯ ಪ್ರಯತ್ನಗಳಿಂದ ಕನ್ನಡ ಸಾಹಿತ್ಯ ಚರಿತ್ರೆಗೆ ಒಂದು ವಿಶಿಷ್ಟವಾದ ರೂಪ ದೊರೆಯುವುದು ಸಾಧ್ಯವಾಗಿದೆ.

ಡಾ.ರಂ.ಶ್ರೀ ಮುಗಳಿ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ 4 ಭಾಗಗಳಾಗಿ ವಿಂಗಡಿಸಿದ್ದಾರೆ; (ಅ) ಪಂಪ ಪೂರ್ವ ಯುಗ, (ಆ) ಪಂಪ ಯುಗ, (ಇ) ಬಸವ ಯುಗ ಹಾಗೂ (ಈ) ಕುಮಾರವ್ಯಾಸ ಯುಗ. ಬಸವಯುಗಕ್ಕೆ ಬದಲಾಗಿ ಹರಿಹರ ಯುಗ; ಬಸವಣ್ಣ ಸಮಾಜ ಸುಧಾರಕ, ಶ್ರೇಷ್ಠ ಸಂತ ಆದ್ದರಿಂದ ಬಸವಯುಗಕ್ಕೆ ಬದಲು ಹರಿಹರ ಯುಗವೆಂದು ಕರೆಯಬಹುದೆಂಬುದು ಉತ್ತಮ ಎಂಬ ಅಭಿಪ್ರಾಯವು ವಿದ್ವಾಂಸರಲ್ಲಿದೆ. ಕನ್ನಡ ಸಾಹಿತ್ಯ ಬೆಳೆದುಬಂದಿರುವ ಹಾದಿಯನ್ನು ತಿಳಿಯಲು ಸಾಹಿತ್ಯ ಜೀವನದ ಪ್ರತಿಬಿಂಬ; ಗತಿ ಬಿಂಬ ಆಗಿರುವುದರಿಂದ ಈ ನೆಲದ ಜನ ಜೀವನವನ್ನು ಒಳಹೊಕ್ಕು ನೋಡುವುದಕ್ಕೆ ಹಾಗೂ ಅದರ ಹಿನ್ನೆಲೆಯಲ್ಲಿ ಕನ್ನಡಿಗರ ನಾಡಿ ಮಿಡಿತವನ್ನು ತಿಳಿಯುವುದಕ್ಕಾಗಿ ಪ್ರತಿಯೊಬ್ಬ ಕನ್ನಡಿಗ ಕನ್ನಡ ಸಾಹಿತ್ಯ ಚರಿತ್ರೆಯನ್ನು ಓದಲೇಬೇಕಾಗಿದೆ.

**ಪಂಪ ಪೂರ್ವ ಯುಗ / ಪೂರ್ವದ ಹಳಗನ್ನಡ:** ಈ ಯುಗವನ್ನು ಕನ್ನಡ ಸಾಹಿತ್ಯೋದಯದ ಕಾಲ ಎಂದು ಕರೆಯಲಾಗಿದೆ. ಕನ್ನಡ ಸಾಹಿತ್ಯ ರೂಪುಗೊಂಡಿರುವುದೇ ಜನಪದ ಸಾಹಿತ್ಯ, ಶಾಸನ ಸಾಹಿತ್ಯ, ಗ್ರಂಥಸ್ಥ ಸಾಹಿತ್ಯಗಳ ತ್ರಿವೇಣಿ ಸಂಗಮದಿಂದ ಉಪಲಬ್ಧ ಮೊದಲ ಕೃತಿ "ಕವಿರಾಜಮಾರ್ಗ"ಕ್ಕಿಂತ ಹಿಂದಿನ

ಪ್ರಾಚೀನತೆ ರೂಪುರೇಷೆಗಳನ್ನು ನಿರ್ಧರಿಸಲು ಮಾನದಂಡವಾಗಿ ದೊರೆತಿರುವ ಶಾಸನಗಳನ್ನೇ ಅವಲಂಬಿಸಬೇಕಿದ್ದು ಹೀಗಾಗಿ ಕವಿರಾಜಮಾರ್ಗದವರೆಗಿನ ಕನ್ನಡ ಸಾಹಿತ್ಯ ಚರಿತ್ರೆಯೆಂದರೆ ಆ ಕಾಲಘಟ್ಟದಲ್ಲಿ ಉಪಲಬ್ಧವಿರುವ ಶಾಸನಗಳ ಚರಿತ್ರೆಯೇ ಆಗಿದೆ. ಶಾಸನಗಳು ಒಂದು ಭಾಷೆಯ ಉಗಮ ಮತ್ತು ಸಾಹಿತ್ಯದ ಪ್ರಾಚೀನತೆಯ ಮೇಲೆ ಬೆಳಕು ಚೆಲ್ಲುವ ಲಿಖಿತ ದಾಖಲೆಗಳಾಗಿವೆ.

**(ಅ) ಕವಿರಾಜಮಾರ್ಗ:** ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಗುರುತಿಸುವಲ್ಲಿ ಇದೊಂದು ಆರಂಭದ ಮೈಲಿಗಲ್ಲಾಗಿರುವ ಕನ್ನಡದ ಮೊಟ್ಟ ಮೊದಲ ಉಪಲಬ್ಧ ಲಕ್ಷಣ ಗ್ರಂಥ, ಕಾಲ ಸುಮಾರು ಕ್ರಿ.ಶ 850. ಗ್ರಂಥ ಕರ್ತೃ ರಾಷ್ಟ್ರ ಕೂಟರ ಅಮೋಘವರ್ಷ ನೃಪತುಂಗನಾಗಿದ್ದರಬಹುದು ಎಂದು ಕೆಲವು ವಿದ್ವಾಂಸರು ಮೊದಲಿಗೆ ಅಭಿಪ್ರಾಯ ಪಟ್ಟಿದ್ದರು ತದನಂತರದಲ್ಲಿ ದೊರೆಯ ಆಸ್ಥಾನದಲ್ಲಿದ್ದ ಶ್ರೀವಿಜಯ ಕೃತಿ ರಚನಕಾರನೆಂದು ಸಂಶೋಧಕರು ನಿರ್ಧರಿಸಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಆರಂಭದ ಸ್ವರೂಪವನ್ನು ಅಧ್ಯಯನ ಮಾಡಬಯಸುವವರಿಗೊಂದು ಉತ್ತಮ ಆಧಾರಾಕೃತಿ, ಸಂಸ್ಕೃತದಲ್ಲಿ ದಂಡಿ ಬರೆದಿರುವ "ಕಾವ್ಯಾದರ್ಶ"ದ ಕನ್ನಡ ಅನುವಾದಿತ ಕೃತಿಯಾಗಿದ್ದು ಮೂರು ಪರಿಚ್ಛೇಧಗಳಿವೆ. ಕವಿ ಶ್ರೀವಿಜಯ ಮೊದಲ ಪರಿಚ್ಛೇದದಲ್ಲಿ ನಾಡು, ನುಡಿ ನಾಡವರ ಬಗ್ಗೆ ಅಪಾರ ಅಭಿಮಾನದಿಂದ ಹೇಳಿಕೊಂಡಿದ್ದಾನೆ. "ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್‌ಭಾವಿಸಿದ ಜನಪದಂ ವಸು ಧಾವಲಯ ವಿಲೀನ ವಿಶದ ವಿಷಯ ವಿಶೇಷಂ"–ಈ ಕಂದ ಪದ್ಯದಲ್ಲಿ ಕನ್ನಡಿಗರ ಗುಣ, ಸ್ವಭಾವ, ನಾಡಿನ ಗಡಿ ಸೀಮೆಯನ್ನು ಪ್ರಸ್ತಾಪಿಸಿರುವುದರ ಜೊತೆಗೆ ಚತ್ತಾಣ–ಬೆದಂಡೆಗಳೆಂಬ ಎರಡು ಕಾವ್ಯ ಪ್ರಕಾರಗಳನ್ನು ಹೆಸರಿಸಿದ್ದಾನೆ. 'ಕವಿರಾಜಮಾರ್ಗ'ಕ್ಕಿಂತ ಪೂರ್ವದಲ್ಲಿ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆದಿತ್ತು ಎಂಬುದಕ್ಕೆ ಪೂರ್ವದ ಗದ್ಯ ಪದ್ಯ ಕವಿಗಳ ಹೆಸರನ್ನು ಶ್ರೀವಿಜಯ ಹೆಸರಿಸಿದ್ದಾನೆ. ವಿಮಳ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತರನ್ನು ಗದ್ಯಕವಿಗಳೆಂದು ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲರನ್ನು ಪದ್ಯಕವಿಗಳೆಂದು ಹೆಸರಿಸಿದ್ದಾನೆ. ಆದರೆ ಯಾವ ಕವಿಯ ಕೃತಿಯು ಉಪಲಬ್ಧವಿಲ್ಲ.

**(ಆ) ವಡ್ಡಾರಾಧನೆ:** ಪಂಪ ಪೂರ್ವ ಯುಗದ ಮೊದಲ ಗದ್ಯ ಕೃತಿಯಾಗಿದ್ದು, ಕೃತಿಯ ಕಾಲ ಕ್ರಿ.ಶ.920. "ಹರಿಷೇಕಣಡಾಕೋಶ" ವಡ್ಡಾರಾಧನೆಯ ಮೂಲ ಆಕರವೆಂಬುದು ವಿದ್ವಾಂಸರ ಅಭಿಪ್ರಾಯ ಪಟ್ಟರೇ, ಭಗವತಿ ಆರಾಧನಾ ಮತ್ತು ಮೂಲಾಚಾರ ಕೃತಿಗಳು ಇರಬಹುದೆಂದು ಸಂಶೋಧಕರು ಅಭಿಮತ, ಕೆಲವು ಸಂಶೋಧನಕಾರರು ಈ ಕೃತಿಯನ್ನು ಶಿವಕೋಟ್ಯಾಚಾರ್ಯ ಬರೆದಿರಬೇಕೆಂದೂ ಸಂಶೋಧಕರಾದ ಹಂಪನಾಗರಾಜಯ್ಯನವರು, ಬ್ರಾಜಿಷ್ಣುವೆಂದು ಅಭಿಪ್ರಾಯಪಟ್ಟಿದ್ದಾರೆ. ವಡ್ಡಾರಾಧನೆಯಲ್ಲಿ ಸಲ್ಲೇಖನ ವ್ರತ ಆಚರಿಸಿ ಪ್ರಾಣ ತ್ಯಜಿಸುವ ವೈರಾಗ್ಯವನ್ನು ಹೇಳುವ 19 ಜೈನ ಕಥೆಗಳಿವೆ. ನೈತಿಕ ಬೋಧನೆ, ಸಾಹಿತ್ಯಿಕ ಗುಣ, ಆ ಕಾಲದ ಆಡುಭಾಷೆ ಇವುಗಳಿಂದಾಗಿ ಓದುಗರ ಗಮನ ಸೆಳೆಯುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಸಣ್ಣ ಕಥೆಗಳ ಸಂಕಲನ, ಜೈನಧಾರ್ಮಿಕ ಸಂಕಲನ, ಹೀಗಾಗಿ ಪೂರ್ವದ ಹಳಗನ್ನಡದ ಭಾಷಾ ಸ್ವರೂಪವನ್ನು ಅರಿಯಲು ಇದೊಂದು ಉತ್ತಮ ಆಕರ ಗ್ರಂಥವಾಗಿದೆ.

**ಪಂಪಯುಗ/ಹಳಗನ್ನಡ ಕಾಲ/ಜೈನ ಯುಗ/ಚಂಪೂ ಯುಗ/ಕ್ಷಾತ್ರ ಯುಗ (10ರಿಂದ 13ನೇ ಶತಮಾನ)**

ಕ್ರಿ.ಶ. 9ನೆಯ ಶತಮಾನದಿಂದ 12ನೆಯ ಶತಮಾನದವರೆಗಿನ ಕಾಲವನ್ನು ಕನ್ನಡ ಸಾಹಿತ್ಯ ವನ್ನು ಹಳೆಗನ್ನಡ ಸಾಹಿತ್ಯವೆಂದು ಗ್ರಹಿಸಲಾಗಿದೆ. ಹಳೆಗನ್ನಡ ಸಾಹಿತ್ಯವನ್ನು ಬಹುಪಾಲು ಚಂಪೂ ಸ್ವರೂಪದಲ್ಲಿ

(ಪಂಪಯುಗ) ಕಾಣಬಹುದಾಗಿದೆ. ಈ ಕಾಲಘಟ್ಟದಲ್ಲಿ ಜೈನ ಧರ್ಮೀಯ ಕವಿಗಳು ಕನ್ನಡ ಸಾಹಿತ್ಯವನ್ನು ಸಮೃದ್ಧಿಯಾಗಿ ಬೆಳೆಸಿದ್ದಾರೆ. ಆದಿ ಮಹಾಕವಿ ಪಂಪನನ್ನು ಮೊದಲುಗೊಂಡು ಪೊನ್ನ, ರನ್ನ, ನಾಗ ಚಂದ್ರ, 1ನೇ ನಾಗವರ್ಮ ಚಾವುಂಡರಾಯ, ಚಂದ್ರರಾಜ, ಶ್ರೀಧರಾಚಾರ್ಯ, ದುರ್ಗಸಿಂಹ, ನಯಸೇನ, ಬ್ರಹ್ಮ ಶಿವ, ರಾಜಾದಿತ್ಯ, ಕೀರ್ತಿವರ್ಮ, ಉದಯಾದಿತ್ಯ, 2ನೇ ನಾಗವರ್ಮ ಮೊದಲಾದ ಕವಿಪುಂಗವರಿಂದ ಸೃಜನಶೀಲ ಮತ್ತು ಶಾಸ್ತ್ರ ಸಾಹಿತ್ಯಗಳೆರಡರಲ್ಲೂ ಸಮೃದ್ಧ ಸಾಹಿತ್ಯವನ್ನು ಕಾಣಬಹುದಾಗಿದೆ. ಪಂಪ, ಪೊನ್ನ, ರನ್ನರು ರತ್ನತ್ರಯರೆಂದರೆ ಪೊನ್ನ, ರನ್ನ, ಜನ್ನರು ಕವಿಚಕ್ರವರ್ತಿಗಳೆಂದು ಪ್ರಸಿದ್ಧರಾಗಿದ್ದಾರೆ. ಜೈನರೇ ಕನ್ನಡ ಸಾಹಿತ್ಯದ ಮೊದಲ ಹರಿಕಾರರೆಂದು ವಿದ್ವಾಂಸರ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

**(ಅ) ಪಂಪ:** ಕನ್ನಡದ ಆದಿ ಮಹಾಕವಿ. ಈತನ ಕಾಲ ಕ್ರಿ.ಶ 920. **"**ವಿಕ್ರಮಾರ್ಜುನ ವಿಜಯ**"** ಮತ್ತು ಆದಿಪುರಾಣ ಎಂಬ ಕೃತಿಗಳನ್ನು ಲೌಕಿಕ ಮತ್ತು ಧಾರ್ಮಿಕ ಎಂಬ ಎರಡು ಉದ್ದೇಶಗಳಿಗಾಗಿ ರಚಿಸಿದ್ದಾನೆ. ಪಂಪಭಾರತಕ್ಕೆ ಮೂಲ ಆಕರ ವೇದವ್ಯಾಸರ ಮಹಾಭಾರತವೇ ಪಂಪನಕೃತಿ 14 ಆಶ್ವಾಸಗಳಿಂದ ಕೂಡಿದ್ದು ಪಾಂಡವ ಕೌರವ ಜನನದಿಂದ ದುರ್ಯೋಧನ ಅವಸಾನದವರೆಗೆ ಚಿತ್ರಿತವಾಗಿದೆ. ಅಂತ್ಯದಲ್ಲಿ ದ್ರೌಪದಿ ಧರ್ಮರಾಯನಿಗೆ ಬದಲಾಗಿ ಅರ್ಜುನ ಸುಭದ್ರೆಯರಿಗೆ ಪಟ್ಟಾಭಿಷೇಕವಾಗುವುದು ಇಲ್ಲಿ ತನ್ನ ಆಶ್ರಯದಾತ ಅರಿಕೇಸರಿಯನ್ನು ಮಹಾಭಾರತ ಅರ್ಜುನನಿಗೆ ಸಮೀಕರಿಸಿದ್ದಾನೆ. ಆದ್ದರಿಂದ ಮೂಲಭಾರತದ ಕಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಪಾಂಚಾಲಿ ಪಂಚವಲ್ಲಭೆಯಲ್ಲ ಕೇವಲ ಅರ್ಜುನನ ಹೆಂಡತಿ, ದುರ್ಯೋಧನನನ್ನು ಸಜ್ಜನನಂತೆ ಚಿತ್ರಿಸಿರುವುದು ಮಹಾಭಾರತದಲ್ಲಿ ಬರುವ ಹಿಂಸೆ ರಕ್ತಪಾತಗಳು ಪಂಪಭಾರತದಲ್ಲಿ ಗೌಣ್ಯವಾಗಿದೆ. ದೇವಮಾನವ ಕೃಷ್ಣನಿಗೆ ದೈವತ್ವ ಕೊಟ್ಟಿಲ್ಲ ಹೀಗಾಗಿ ಮಾನವಿಯತೆಯ ದೃಷ್ಟಿಕೋನದಿಂದ ಚಿತ್ರಿಸಲು ಹೊರಟ ಪಂಪ ಭಾರತವು ಲೌಕಿಕ ಕಾವ್ಯ ಎನಿಸಿ ಕರ್ಣನಿಗೆ ಖಳನಾಯಕ ಹಣೆಪಟ್ಟಿ ತೆಗೆದು ದುರಂತ ನಾಯಕನ ಸ್ಥಾನಕ್ಕೇರಿಸಿದ್ದಾನೆ. **"**ನೆನೆಯದಿರಣ್ಣ ಭಾರತದೊಳು ಪರರಾರುಮನೊಂದೆ ಚಿತ್ತದಿಂ ನೆನವೊಡೆ ಕರ್ಣನಂ ನೆನಯ**"** ಎಂದಿದ್ದಾನೆ. ವ್ಯಾಸ ಭಾರತದ ಕಥೆಯನ್ನು ಕೆಲವೆಡೆ ಸಂಕ್ಷಿಪ್ತಗೊಳಿಸಿ ಹಲವೆಡೆ ವಿಸ್ತಾರ ಮಾಡಿ ಪಂಪ ತನ್ನ ವೈಯಕ್ತಿಕ ಪ್ರತಿಭೆಯ ಸತ್ವವನ್ನು ಮೆರೆದಿದ್ದಾನೆ. ಪಂಪನ ಶೈಲಿ–ವರ್ಣನೆಗಳಲ್ಲಿ ಹಿತಮಿತ ಮೃದುವಚನಿ ರಸಧ್ವನಿ ಪ್ರವೀಣತೆ, ದೇಶೀಯ ಔಚಿತ್ಯ ಮತ್ತು ನಾದಸೂಕ್ಷ್ಮತೆ ಮುಂತಾದ ಗುಣಗಳು ಕಂಡುಬರುತ್ತವೆ. ಆದಿಪುರಾಣ ಮತೀಯ ಗ್ರಂಥವಾದರೂ ಕಾವ್ಯ ಧರ್ಮದಿಂದ ಕೂಡಿ ಅದೊಂದು ಉತ್ಕೃಷ್ಟ ಪುರಾಣ ಕಾವ್ಯವಾಗಿದೆ. ಭಾಷಾ ಪ್ರಭುತ್ವ ಸನ್ನಿವೇಶ ನಿರ್ಮಾಣ, ವಸ್ತುವಿನ ನಿರ್ವಹಣೆ, ವರ್ಣನಾ ಕೌಶಲಗಳಲ್ಲಿ ಪಂಪನ ಪ್ರತಿಭೆ ಈ ಎರಡು ಕೃತಿಗಳಲಲಿ ಶ್ರೇಷ್ಠ ಮಟ್ಟದಲ್ಲಿ ಕಾರ್ಯನಿರ್ವಹಿಸಿದೆ. 'ಆದಿಪುರಾಣ'ಕ್ಕೆ ಸಂಸ್ಕೃತದಲ್ಲಿ ಜಿನಸೇನಾಚಾರ್ಯ ಪೂರ್ವ ಪುರಾಣ ಆಕರವಾಗಿದೆ. ಮೊದಲ ತೀರ್ಥಂಕರನಾದ ವೃಷಭನಾಥ ಕಥೆ. 16 ಆಶ್ವಾಸನೆಗಳಿಂದ ಕೂಡಿದ್ದು, ಆದಿನಾಥನ ಮಕ್ಕಳಾದ ಭರತ–ಬಾಹುಬಲಿಯರ ಚರಿತೆಗಳು ಈ ಕಾವ್ಯದ ಭಾಗವಾಗಿದೆ.

**(ಆ) ಪೊನ್ನ:** ರಾಷ್ಟ್ರಕೂಟ ಚಕ್ರವರ್ತಿ ಕೃಷ್ಣನ ಆಶ್ರಯದಲ್ಲಿದ್ದ ಕವಿಚಕ್ರವರ್ತಿ, ಹಾಗೂ ರತ್ನತ್ರಯರ್ಲ್ಲಿ ಎರಡನೆಯವನು. **'**ಶಾಂತಿ ಪುರಾಣ**'** ಭುವನೈಕ್ಯರಾಮಾಭ್ಯುದಯ, ಜಿನಾಕ್ಷರ ಮಾಲೆ ಎಂಬ ಕೃತಿಗಳನ್ನು ರಚಿಸಿದರು. ಭುವನೈಕ್ಯರಾಮಾಭ್ಯುದಯ ಲಭ್ಯವಿಲ್ಲ. 16ನೇ ತೀರ್ಥಂಕರನಾದ ಶಾಂತಿನಾಥನ ಚರಿತ್ರೆಯನ್ನು 12 ಆಶ್ವಾಸನೆಗಳನ್ನು ರಚಿಸಿದ್ದಾನೆ. ದಾನಚಿಂತಾಮಣಿ ಅತ್ತಿಮಬ್ಬೆ, ಶಾಂತಿನಾಥ ಪುರಾಣವನ್ನು ಪೊನ್ನನಿಂದ

ಬರೆಯಿಸಿ 1000 ಪ್ರತಿಗಳನ್ನು ಮಾಡಿ ಅದರ ಜೊತೆಗೆ ಚಿನ್ನದ ಜಿನ ಪ್ರತಿಮೆಯೊಂದಿಗೆ ದಾನ ಮಾಡಿದಳು ಇದು ಪೊನ್ನನ ಶಾಂತಿಪುರಾಣದ ಹಿರಿಮೆಗೆ ಹಿಡಿದ ಕೈಗನ್ನಡಿಯಾಗಿದೆ. 'ಜಿನಾಕ್ಷರ ಮಾಲೆ'ಯಲ್ಲಿ 36 ಕಂದ ಪದ್ಯಗಳಲ್ಲಿ ಮಾಡಿದ ಜಿನ ಸ್ತುತಿ ಇದೆ.

**(ಇ) ರನ್ನ:** "ರನ್ನನಿರುವ ಕನ್ನಡಕ್ಕೆ ಅನ್ಯರಿಂದ ಬಹುದೆಥಕ್ಕೆ. ರನ್ನ ಬರಿಯ ಕವಿಯೇ ಸಿಡಿಲ ಚಕ್ಕೆ" ಕುವೆಂಪು ಅವರ ಮಹಾಕವಿ ರನ್ನನನ್ನ ಕುರಿತಾದ ಅಭಿವ್ಯಕ್ತಿ. ಅಕ್ಷರ ಸಹ ಸತ್ಯ. ಈತನ ಕಾಲ ಕ್ರಿಶ 949. ಜನ್ಮಸ್ಥಳ ಬಿಜಾಪುರ ಜಿಲ್ಲೆ "ಮುದಾವೊಳಲು". ಲಭ್ಯ ಕೃತಿಗಳು ಸಾಹಸಭೀಮ ವಿಜಯ, ಅಜಿತನಾಥ ಪುರಾಣ ತಿಲಕಂ ಎಂಬ ಚಂಪೂಕಾವ್ಯಗಳು. ರತ್ನಕಂದ ಎಂಬ ನಿಘಂಟು ಕಾವ್ಯದ ಕೆಲವು ಪದ್ಯಗಳು ದೊರೆತಿವೆ. ಪರಶುರಾಮ ಚರಿತ, ಚಕ್ರೇಶ್ವರ ಚರಿತ ಗ್ರಂಥಗಳು ಅಲಭ್ಯ, ಈತನ ಗುರು ಅಜಿತ ಸೇನಾಚಾರ್ಯ, ಗಂಗಮಂತ್ರಿ ಚಾವುಂಡರಾಯ ಹಾಗೂ ದಾನಚಿಂತಾಮಣಿ ಅತ್ತಿಮಬ್ಬೆ ಸಹಕಾರ ಪಡೆದಿದ್ದು ಚಾಲುಕ್ಯ ಚಕ್ರವರ್ತಿ ತೈಲಪನಲ್ಲಿ ಆಶ್ರಯಪಡೆದಿದ್ದು ತೈಲಪನ ಮಗನಾದ ಇರೆವಬೆಡಂಗ ಸತ್ಯಾಶ್ರಯನನ್ನು ತನ್ನ ಸಾಹಸ ಭೀಮ ವಿಜಯದಲ್ಲಿ ಭೀಮನಿಗೆ ಸಮೀಕರಿಸಿ ಕಾವ್ಯದುದ್ದಕ್ಕೂ ಪಂಪನನ್ನು ಅನುಸರಿಸಿದ್ದರೂ ತನ್ನ ಪ್ರತಿಭಾ ಶಕ್ತಿಯಿಂದ ವಿಶೀಷ್ಟ ಕಾವ್ಯವೊಂದನ್ನು ನೀಡಿದ್ದಾನೆ. ಪಂಪಭಾರತದ 13ನೇ ಆಶ್ವಾಶವೇ ರನ್ನ ಕಾವ್ಯಕ್ಕೆ ವಸ್ತುವಾಗಿದೆ. ಸಂಸ್ಕೃತ ನಾಟಕ ಕಾರರಾದ ಭಟ್ಟ ನಾರಾಯಣರ ವೇಣಿ ಸಂಹಾರ; ಭಾಸನ ಊರು ಭಂಗ ಕೃತಿಗಳ ದಟ್ಟ ಪ್ರಭಾವ ಗಧಾಯುದ್ಧದಲ್ಲಿ ಕಂಡುಬರುತ್ತದೆ. ಕುರುಕ್ಷೇತ್ರ 18ನೇ ದಿನದ ಕಥೆಯನ್ನು ತನ್ನ ಕಾವ್ಯವಸ್ತುವಾಗಿಸಿಕೊಂಡು ಮಹಾಭಾರತದ ಕಥೆಯೆಲ್ಲವನ್ನು ನೆನಪಿಸುವಂತೆ ಸಿಂಹಾವಲೋಕ ಕ್ರಮದಿಂದ ನಿರೂಪಿಸಿದ್ದಾರೆ. ವೀರ, ರೌದ್ರ ರಸಗಳು ಪ್ರಧಾನವಾಗಿದ್ದು ಉಳಿದ ರಸಗಳು ಹಿತಮಿತವಾಗಿದೆ. ಕಾವ್ಯದಲ್ಲಿ ನಾಟಕೀಯ ಗುಣವಿದೆ. ನಾಯಕ ಭೀಮನಾದರೂ ಕೌರವನನ್ನು ನಾಯಕನೇನೋ ಎನ್ನುವಂತೆ ಅನೇಕ ಉದಾತ್ತ ಗುಣಗಳನ್ನು ಒಳಗೊಂಡ ಮಹಾನುಭಾವನಾಗಿ ದುರಂತನಾಯಕನಾಗಿ ಚಿತ್ರಿಸಿದ್ದಾನೆ. ಆಗಮಿಕ ಕಾವ್ಯ ಅಜಿತನಾಥ ಪುರಾಣ ತಿಲಕಂ 2ನೇ ತೀರ್ಥಂಕರರ ಕಥೆ 12 ಆಶ್ವಾಸಗಳಲ್ಲಿ ಮೂಡಿ ಬಂದಿದೆ. ಈ ಕಾವ್ಯದ ವೈಶಿಷ್ಟ್ಯವೆಂದರೆ ಭವಾವಳಿಯು ಬಂಧನವಲ್ಲ, ಭಕ್ತಿ, ಜ್ಞಾನ, ವೈರಾಗ್ಯದಿಂದ ಪಾರಮಾರ್ಥಿಕ ಸಂಗತಿಗಳನ್ನು ತನ್ನ ಕವಿತ್ವ ಶಕ್ತಿಯ ಮೂಲಕ ಈ ಕಾವ್ಯದಲ್ಲಿ ಉಜ್ವಲಗೊಳಿಸಿದ್ದಾನೆ.

**(ಈ) ಚಾವುಂಡರಾಯ (ಕಾಲ ಕ್ರಿ.ಶ. 980):** ಗಂಗರ ರಾಚಮಲ್ಲನ ಮಂತ್ರಿ ಹಾಗೂ ಸೇನಾನಿ ಶ್ರವಣಬೆಳಗೊಳದ ಭವ್ಯ ಗೊಮ್ಮಟ ಶಿಲಾ ಮೂರ್ತಿಯ ನಿರ್ಮಾತೃ. ಗುಣಭದ್ರನ ಸಂಸ್ಕೃತ ಮಹಾ ಪುರಾಣವನ್ನು ತನ್ನ ತ್ರಿಷಷ್ಟಿ ಲಕ್ಷಣ ಮಹಾಪುರಾಣ ಆಕರವನ್ನಾಗಿ ಬಹುಮಟ್ಟಿಗೆ ಬಳಸಿಕೊಂಡಿದ್ದಾನೆ. ಚಾವುಂಡರಾಯ ಪುರಾಣ ಎಂದು ಸಹ ಕೃತಿಯನ್ನು ಹೆಸರಿಸಲಾಗುತ್ತದೆ. ಗದ್ಯ ಶೈಲಿಗಾಗಿ ತುಂಬಾ ಹೆಸರು ಪಡೆದಿದೆ. ತನ್ನ ಸರಳ ಲಾಲಿತ್ಯ, ಗಂಭೀರ ಗತಿಗಳಲ್ಲಿ ಇಲ್ಲಿನ ಗದ್ಯವು ತನ್ನ ಸಾಹಿತ್ಯ ಗುಣವನ್ನು ವಿಪುಲವಾಗಿ ತೋರಿಸಿದೆ. 24ನೇ ತೀರ್ಥಂಕರ ಚರಿತ್ರೆ ಇದಾಗಿದೆ. ಕನ್ನಡ ಪದಗಳ ಬಳಕೆ ಸಮ್ಮೃದ್ಧವಾಗಿದ್ದು ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಗಮನಾರ್ಹವಾದುದು.

**(ಉ) 1ನೇ ನಾಗವರ್ಮ (ಕಾಲ ಕ್ರಿ.ಶ. 990):** ಕರ್ನಾಟಕ ಕಾದಂಬರಿ ಮತ್ತು ಛಂದೋಂಬುದಿಗಳು, ಭಾಷಾ ಭೂಷಣ, ಅಭಿದಾನ ವಸ್ತುಕೋಶ ಪ್ರಮುಖ ಕೃತಿಗಳು, ಉಪಲಬ್ಧ ಕನ್ನಡದ ಮೊದಲ ಛಂದೋ ಗ್ರಂಥವೆಂಬ ಹಿರಿಮೆಯನ್ನು ಛಂದೋಂಬುದಿ ಹೊಂದಿದ್ದು ಕರ್ಣಾಟಕ ವಿಷಯ ಜಾತಿ ಎಂಬುದನ್ನು

ಪ್ರತ್ಯೇಕ ವಿಭಾಗವಾಗಿ ಈ ಕೃತಿಯಲ್ಲಿ ನಿರೂಪಿಸಿದ್ದಾನೆ. ನಾಗವರ್ಮ ಕೃತಿಗಳನ್ನು ಓದಿದರೇ ಅವನೋರ್ವ ಶಾಸ್ತ್ರಕಾರ ಮಾತ್ರವಲ್ಲದೆ ಕವಿಯೂ ಆಗಿದ್ದನೆಂಬುದು ವಿಧಿತವಾಗುತ್ತದೆ ಶಾಸ್ತ್ರ ದೃಷ್ಟಿಯಿಂದ, ಸರ್ವ ವಿಷಯ ಭಾಷಾಜಾತಿ ಹಾಗೂ ಕರ್ಣಾಟಕ ವಿಷಯ ಜಾತಿ ಎಂಬ ವರ್ಗೀಕರವು ಕನ್ನಡ ಛಂದಸ್ಸಿನ ಸ್ವರೂಪ ಹಾಗೂ ಪ್ರಭೇದಗಳ ವಿವರಣೆಯು ಸಂಕ್ಷಿಪ್ತವಾಗಿದ್ದರೂ ಅಭ್ಯಾಸಿಗಳಿಗೆ ಉಚಿತವೆನಿಸಿದೆ. ಸಂಸ್ಕೃತದ ಬಾಣ "ಕಾದಂಬರಿ"ಯನ್ನು "ಕರ್ಣಾಟಕ ಕಾದಂಬರಿ" ಎಂದು ಕನ್ನಡಿಸಿದ್ದಾನೆ. ಇದೊಂದು ಪ್ರೇಮ, ಶೃಂಗಾರದ ಮಹಾನ್ ಕೃತಿ ಸೌಂದರ್ಯ, ಕರುಣೆಗಳ ಚಿತ್ರವು ಮೋಹಕನಾಗಿ ಮೂಡಿಬಂದಿದೆ ಒಟ್ಟಿನಲ್ಲಿ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯಷ್ಟು ಮೇಲಾದ ಪರಿವರ್ತನವು ಇನ್ನೊಂದಿಲ್ಲ ಎಂದರೇ ಅತಿಶಯೋಕ್ತಿ ಆಗಲಾರದು.

**(ಊ) ದುರ್ಗಸಿಂಹ (ಕಾಲ ಸು. 1031):** ಜಗದೇಕಮಲ್ಲನಲ್ಲಿ ದಂಡನಾಯಕನೂ, ಸಂಧಿ ವಿಗ್ರಹಿಯು ಆಗಿದ್ದನು, ಗುಣಾಢ್ಯನಿಂದ ಪೈಶಾಚಿ ಭಾಷೆಯಲ್ಲಿ ರಚಿತವಾಗಿರುವ ಬೃಹತ್ಕಥೆಯನ್ನಾಧರಿಸಿ ವಸುಭಾಗಭಟ್ಟನು ಸಂಸ್ಕೃತದಲ್ಲಿ "ಪಂಚತಂತ್ರ"ವನ್ನು ಬರೆದನು. ಈ ಕೃತಿಯನ್ನು ಆಧರಿಸಿ ಕನ್ನಡದಲ್ಲಿ "ಪಂಚತಂತ್ರ"ವನ್ನು ಬರೆದಿದ್ದಾನೆ. ಚಂಪೂ ಶೈಲಿಯಲ್ಲಿರುವ ಒಂದು ಕಥನ ಕಾವ್ಯ. ಕಥನ ಕೌಶಲ್ಯ, ನೀತಿ ನಿರೂಪಣೆ ಉತ್ತಮವಾಗಿದೆ. ದಡ್ಡ ರಾಜಕುಮಾರನನ್ನು ತಿದ್ದುವ ಸಲುವಾಗಿ ಹುಟ್ಟಿಕೊಂಡ ಕಥೆಗಳು ಮಿತ್ರ ಸಂಹಿತಕ್ಕೆ ಸೇರುವಂತಹವುಗಳು ಪ್ರಾಣಿವರ್ಗದ ಇಲ್ಲಿನ ಕಥೆಗಳು ಮನುಷ್ಯ ಬದುಕಿನ ಮತ್ತು ಅವುಗಳ ಪರಿಹಾರಕ್ಕೆ ಉಪಾಯಗಳನ್ನು ಅದ್ಭುತವಾಗಿ ಚಿತ್ರಿಸುತ್ತದೆ. (1) ಭೇದ ಪ್ರಕರಣ ವರ್ಣ್ಯಂ, (2) ಪರೀಕ್ಷಾ ವ್ಯಾವರ್ಣಂ, (3) ವಿಶ್ವಾಸ ಪ್ರಕರಣ ವರ್ಣ್ಯಂ, (4) ವಂಚನಾ ಪ್ರಕರಣ ವರ್ಣ್ಯಂ ಹಾಗೂ (5) ಮಿತ್ರ ಕಾರ್ಯ ಪ್ರಕರಣಂ – ಪಂಚತಂತ್ರಗಳು ಗ್ರಂಥ ಶೀರ್ಷಿಕೆಯನ್ನು ಸೂಚಿಸುತ್ತದೆ.

**(ಋ) 2ನೇ ನಾಗವರ್ಮ (ಕಾಲ ಸು. 1042):** 'ವರ್ಧಮಾನ ಪುರಾಣ', ಅಭಿದಾನವಸ್ತುಕೋಶ, ಕಾವ್ಯಾವಲೋಕನ, ಕರ್ಣಾಟಕ ಭಾಷಾ ಭೂಷಣ, ಎಂಬ ಗ್ರಂಥ ಕರ್ತೃ. ವ್ಯಾಕರಣಕಾರ, ಅಲಂಕಾರ, ನಿಘಂಟು, ಛಂದಸ್ಸುಗಳಲ್ಲಿ ಉತ್ತಮ ಪಂಡಿತ, 'ಕಾವ್ಯಾವಲೋಕನ' ಕನ್ನಡ ಸಾಹಿತ್ಯದ ಮೊದಲನೆಯ ಅಲಂಕಾರ ಗ್ರಂಥ ಸೂತ್ರಗಳು ಕಂದ ಪದ್ಯದಲ್ಲಿ ರಚಿತವಾದರೆ ಉದಾಹರಣೆಗಳನ್ನು ವಿವಿಧ ಕಾವ್ಯ ಹಾಗೂ ಶಾಸ್ತ್ರ ಗ್ರಂಥಗಳಿಂದ ಒದಗಿಸಿದ್ದಾನೆ. ಹಾಗೆಯೇ 'ಕರ್ಣಾಟಕ ಭಾಷಣ ಭೂಷಣಂ' ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ಮೊದಲನೆಯದಾಗಿದೆ. 'ಅಭಿದಾನ ವಸ್ತುಕೋಶ' ಕಂದ ವೃತ್ತಗಳ ರೂಪದಲ್ಲಿ ಕನ್ನಡದಲ್ಲಿ ರಚಿತವಾದ ನಿಘಂಟು ಇದರಲ್ಲಿ ಸಂಸ್ಕೃತ ಪದಗಳಿಗೆ ಕನ್ನಡ ಅರ್ಥಗಳನ್ನು ವಿವರಿಸಲಾಗಿದೆ. ಕನ್ನಡ ಸಾಹಿತ್ಯ ಬೆಳವಣಿಗೆಯಲ್ಲಿ ಸಂಸ್ಕೃತ ಮತ್ತು ಹಳಗನ್ನಡ ಕಾವ್ಯಗಳಲ್ಲಿ ಬಳಕೆಯಾಗಿರುವ ಸಂಸ್ಕೃತ ಶಬ್ಧಗಳನ್ನು ತಿಳಿಯಲು ಸಹಕಾರಿಯಾಗಿದೆ.

**(ಎ) ನಾಗಚಂದ್ರ (ಕಾಲ – ಕ್ರಿ.ಶ. 1100):** ಅಭಿನವಪಂಪ ಬಿರುದಾಂಕಿತ, ಮಲ್ಲಿನಾಥ ಪುರಾಣ, ರಾಮಚಂದ್ರ ಚರಿತಪುರಾಣ (ಪಂಪ ರಾಮಾಯಣ) ಕೃತಿಗಳ ಕರ್ತೃ. ಮೊದಲ ಕೃತಿ ಮಲ್ಲಿನಾಥ ಪುರಾಣದಲ್ಲಿ 19ನೇ ತೀರ್ಥಂಕರನಾದ ಮಲ್ಲಿನಾಥನ ಚರಿತ್ರೆಯಿದೆ. 14 ಆಶ್ವಾಸಗಳಿವೆ. ರಾಮಚಂದ್ರ ಚರಿತ ಪುರಾಣ ಕನ್ನಡದಲ್ಲಿ ದೊರೆತ ಮೊದಲ ಜೈನ ರಾಮಾಯಣವೆಂಬ ಕೀರ್ತಿ ಇದಕ್ಕಿದೆ. "ಪಿರಿದೆನಿಸಿರ್ದ ರಾಮ ಕಥೆಯಂ ಕಿರಿದಾಗಿರೆ" ಎಂದು ನಿರ್ಣಯಿಸಿ, ಆ ಮೂಲಕ ಸಂಕ್ಷಿಪ್ತದಲ್ಲಿ ಅರ್ಥಪೂರ್ಣವಾಗಿ

ಧ್ವನಿಸುವಂತೆ ನಾಗಚಂದ್ರ ಚಿತ್ರಿಸಿದ್ದಾನೆ. ಇದರಲ್ಲಿ 'ದೇಸಿ' ಮತ್ತು 'ಮಾರ್ಗ'ಗಳ ಸುಂದರ ಸಮ್ಮಿಲನವಿದೆ. ರಸ ಸ್ವಾದನೆಯ ದೃಷ್ಟಿಯಿಂದ ಬಹು ಮೆಚ್ಚುಗೆ ಗಳಿಸಿದೆ. ಪಂಪ ಕರ್ಣ ಮತ್ತು ದುರ್ಯೋಧನನ ಪಾತ್ರಗಳನ್ನು ಉದ್ಧರಿಸಿದಂತೆ ರಾವಣನನ್ನು ಒಳ್ಳೆ ಮನುಷ್ಯ ಪಾತ್ರದಂತೆ ನಾಗಚಂದ್ರ ಚಿತ್ರಿಸಿದ್ದಾನೆ. ಸೀತೆಯ ಅಪಹರಣ ಇಲ್ಲಿ ವಿಧಿವಶದಿಂದಾದದ್ದು, ವರ್ಣನಾ ಸಾಮರ್ಥ್ಯ, ಪಾತ್ರಗಳ ಬೆಳವಣಿಗೆ, ಅಲಂಕಾರಗಳ ಔಚಿತ್ಯ ವಸ್ತು ನಿರ್ಮಾಣದ ಪ್ರತಿಭಾ ದೃಷ್ಟಿ, ಮುಂತಾದ ಕಾರಣಗಳಿಗಾಗಿ ಪಂಪರಾಮಾಯಣ ಕನ್ನಡ ಸಾಹಿತ್ಯ ಬೆಳವಣಿಗೆಯಲ್ಲಿ ಮುಖ್ಯ ಕೃತಿಯೆನಿಸಿಕೊಳ್ಳುತ್ತದೆ.

**(ಏ) ನಯಸೇನ ಮತ್ತು ಸಮಕಾಲೀನರು (ಕಾಲ ಸು.ಕ್ರಿ.ಶ 1112):** 'ಧರ್ಮಾಮೃತ'ದ ಕರ್ತೃ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶುದ್ಧ ಕನ್ನಡಕ್ಕೆ ಅಗ್ರಮಣೆ ಕಲ್ಪಿಸಿದ ಜೈನಕವಿ. ಕನ್ನಡ ಕಾವ್ಯ ಕನ್ನಿಕೆಯನ್ನು ಸಂಸ್ಕೃತ ಭೂಯಿಷ್ಟತೆಯಿಂದ ಮುಕ್ತಗೊಳಿಸಿದ ಧೀಮಂತ. ಅನವಶ್ಯಕವಾಗಿ ಕನ್ನಡದಲ್ಲಿ ಸಂಸ್ಕೃತದ ಬೆರಕೆಯನ್ನು ಸಹಿಸಲಿಲ್ಲ, ಸಂಸ್ಕೃತ ವ್ಯಾಮೋಹವು ಗಾಢವಾಗಿದ್ದರೆ ಸಂಸ್ಕೃತದಲಿಯೇ ಬರೆಯಿರಿ ಎಂದು ದಾರ್ಷ್ಟ್ಯದಿಂದ ಉಪದೇಶಿಸಿದವನು. ಕನ್ನಡದ ಚಂಪೂವನ್ನು ಪ್ರೌಢಮೆಯಿಂದ ಸರಳೀಕರಣಗೊಳಿಸಿ ಜನಸಾಮಾನ್ಯರ ನಿಲುವಿಗೆ ನಿಲುಕುವಂತೆ ಮಾಡಿದವನು. ಹಾಗೆಯೇ ಬ್ರಹ್ಮಶಿವಕವಿ "ಸಮಯ ಪರೀಕ್ಷೆ"ಯಲ್ಲಿ ಸಂಸ್ಕೃತ ಭೂಯಿಷ್ಟ ಮಾರ್ಗಶೈಲಿಯನ್ನು ವಿರೋಧಿಸಿ ಸುಲಲಿತ ದೇಸಿ ಶೈಲಿಯಲ್ಲಿ ನಯಸೇನನಂತೆ ಕೃತಿರಚನೆ ಮಾಡಿರುವನು. ತಮ್ಮ ಧರ್ಮ ಪ್ರಚಾರ ಮತ್ತು ಪರಮತ ವಿಡಂಬನೆಗೆ ಈರ್ವರು ಪ್ರಸಿದ್ದರೆ ರಾಜಾದಿತ್ಯನ "ವ್ಯವಹಾರ ಗಣಿತ" ಕೀರ್ತಿವರ್ಮನ "ಗೋವೈದ್ಯ" ಜಗದ್ದಳ ಸೋಮನಾಥನ 'ಕಲ್ಯಾಣಕಾರಕ' ಉದಯಾದಿತ್ಯನ "ಉದಯಾದಿತ್ಯಾಲಂಕಾರ" ಈ ಕಾಲಾವಿದಿಯಲ್ಲಿ ಸೃಜನಶೀಲ ಮತ್ತು ಶಾಸ್ತ್ರ ಸಾಹಿತ್ಯಗಳೆರಡರಲ್ಲೂ ಸಮೃದ್ಧ ಸಾಹಿತ್ಯವನ್ನು ಕಾಣಬಹುದು.

**ಹರಿಹರ ಯುಗ/ಬಸವಯುಗ/ವೀರಶೈವಕಾಲ:** ಭಕ್ತಿ ಭಂಡಾರಿ ಬಸವಣ್ಣನಿಂದ ರೂಪ ಸಾಮ್ರಾಜ್ಯ ಚಕ್ರವರ್ತಿ ಕುಮಾರವ್ಯಾಸನವರೆಗೆ ಅಂದರೆ 12ನೇ ಶತಮಾನದ ಮಧ್ಯದಿಂದ 15ನೇ ಶತಮಾನದವರೆಗೆ ಈ ಯುಗದ ಹರಿವಿದೆ. ಅನೇಕ ದೃಷ್ಟಿಯಿಂದ ಬಸವ/ಹರಿಹರ ಯುಗಕ್ಕೆ ವೈವಿಧ್ಯವಿದೆ, ವೈಶಿಷ್ಟ್ಯವಿದೆ. ಪಂಪಯುಗದವರೆಗೆ ಜೀವನ ಮತ್ತು ಸಾಹಿತ್ಯಗಳು ಹೆಚ್ಚಾಗಿ ಪರಂಪರಾಗತವಾಗಿದ್ದವು. ರೂಢಿ ಎಂಬ ಸ್ಥಾಯಿಗೆ ವ್ಯತ್ಯಾಸವು ಸಂಚಾರಿಯಾಗಿತ್ತು. ಈ ಯುಗದಲ್ಲಿ ವ್ಯತ್ಯಾಸವೆಂಬ ರೂಢಿ ಸಂಚಾರಿಯಾದಂತಾಯಿತು. ಧಾರ್ಮಿಕ–ಸಾಮಾಜಿಕ ಜೀವನದಲ್ಲಿ ಮೂಲಭೂತವಾದ ವ್ಯತ್ಯಾಸಗಳ. ಅದಕ್ಕೆ ವಿರೋಧಕವಾದ ಪ್ರತಿಕ್ರಿಯೆಗಳು. ಸಂಘರ್ಷ–ಸಾಮರಸ್ಯಗಳು ತಲೆದೋರಿ ಕನ್ನಡ ಸಾಹಿತ್ಯದ ಬೆಳವಣಿಗೆಯ ಮೇಲೆ ಆಳವಾದ ವರ್ಚಸ್ಸು ಬೀರಿದವು. ಹೊಸಬಗೆಯ ಆಧ್ಯಾತ್ಮಿಕ ತೇಜಸ್ಸು, ಧಾರ್ಮಿಕ ಶ್ರದ್ಧೆ, ಪ್ರಯೋಗಬುದ್ಧಿಗಳು ಕಂಡುಬಂದವು, ಪಂಡಿತ ಕವಿಗಳ ಜೊತೆಗೆ ಅನೇಕ ಅಧ್ಯಾತ್ಮಿಗಳೂ, ಅನುಭಾವಿಗಳೂ ಸಾಹಿತ್ಯ ನಿರ್ಮಾತರಾದರು ಈ ಹೊಸ ನಿರ್ಮಾತೃಗಳ ನೆರವಿಗೆ ಭಕ್ತಿಭಂಡಾರಿ ಯುಗಪುರುಷ ಬಸವಣ್ಣ ಮುಂದಾಳುವಾದನು.

**ಜೇಡರ ದಾಸಿಮಯ್ಯ:** 11ನೇ ಶತಮಾನದ ಉತ್ತರಾರ್ಧ ಹಾಗೂ 12ನೇ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದ ಕನ್ನಡದ ಆದ್ಯ ವಚನಕಾರ, ನೇಯ್ಗೆ ಈತನ ಕಾಯಕ. 'ರಾಮನಾಥ' ಅಂಕಿತದಿಂದ ನೂರಾರು ವಚನಗಳನ್ನು ರಚಿಸಿದ್ದಾನೆ. ಈತನ ವಚನಗಳಲ್ಲಿ ಭಕ್ತಿಯ ಮೇಲ್ಮೆ, ಉತ್ಕಟವಾದ

ವೀರಶೈವ ನಿಷ್ಠೆ. ನಿಷ್ಠೂರವಾದ ಸ್ಪಷ್ಟ ವಾಕ್ಯ ರಚನೆ ಆಳವಾದ ಅರ್ಥ, ಭಾವ, ಧ್ವನಿ, ಮಾರ್ಮಿಕವಾದ ಸಂಕ್ಷಿಪ್ತ ಶೈಲಿ ಇತ್ಯಾದಿ ಗುಣಗಳು ಕಾಣಸಿಗುತ್ತವೆ. ಬಸವಣ್ಣನು ದಾಸಿಮಯ್ಯನ ಭಾವ–ಅನುಭಾವವನ್ನು ಅನುಸರಿಸಿರುವುದು ಕಂಡುಬರುತ್ತದೆ. ಅಲ್ಲದೇ ಅಲ್ಲಮ ಪ್ರಭು, ಅಕ್ಕಮಹಾದೇವಿ, ಸರ್ವಜ್ಞ ಮೊದಲಾದವರು ದಾಸಿಮಯ್ಯನ ಪ್ರಭಾವಕ್ಕೊಳಗಾಗಿದ್ದಾರೆ.

**ಬಸವಣ್ಣ (ಕಾಲ ಸು. 1131):** ಕೂಡಲಸಂಗಮದೇವ ಅಂಕಿತನಾಮದಿಂದ ಸಾವಿರಾರು ವಚನಗಳನ್ನು ರಚಿಸಿದ್ದಾನೆ. ಸಂತ, ವಚನಕಾರ, ಸಮಾಜ ಸುಧಾರಕ, 12ನೇ ಶತಮಾನದಲ್ಲಿ ಜರುಗಿದ ಸಾಮಾಜಿಕ ಮತ್ತು ಧಾರ್ಮಿಕ ಮಹಾಕ್ರಾಂತಿಯ ನೇತಾರ. ಅಲ್ಲಮ ಜ್ಞಾನಿಯಾದರೆ, ಬಸವ ಸುಧಾರಕ. 'ಲಿಂಗ ಜಂಗಮ ಅಭೇದ ಕಲ್ಪನೆ' ಆತನ ನಿಲುವುಗಳಲ್ಲೊಂದು. ಕಲ್ಯಾಣಿಯ ಕಲಚೂರಿಯ ಬಿಜ್ಜಳ ರಾಜ್ಯದಲ್ಲಿ ಭಂಡಾರಿ ಹಾಗೆ ರಾಜ್ಯದ ಭಕ್ತಿ ಭಂಡಾರಿಯು ಹೌದು. "ಕೊಲ್ಲುವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ, ಕುಲವೇನೋ ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು" ಎಂದು ವ್ಯಕ್ತಿಯ ಯೋಗ್ಯತೆಯನ್ನು ಹುಟ್ಟಿನಿಂದಲೇ ಅಳೆಯುವುದನ್ನು ಬಿಟ್ಟು ಆತನಗುಣದಿಂದ ನಿರ್ಧರಿಸಬೇಕೆಂದು ಸಾರಿದವನು. ಅಂತರಂಗ ನಿರೀಕ್ಷಣೆಯ ಚಿತ್ರ ತಿಳಿಗನ್ನಡಿಯಲ್ಲಿ ಮೂಡಿದಂತೆ ನಿಚ್ಚಳವಾದಂಥ ಬಸವನ ವಚನಗಳಲ್ಲಿ ಬಹಿರಂಗ ಸಮೀಕ್ಷಣೆಯೂ ಸ್ಪಷ್ಟವಾಗಿದೆ. ಇಹಲೋಕದ ಜೀವನವನ್ನು ಸಾಧನೆಯ ಮಾರ್ಗಕ್ಕೆ ಅಳವಡಿಸಿಕೊಳ್ಳುವುದೇ ಈತ ಬೋಧಿಸಿದ ತತ್ವ. ಅದಕ್ಕೆ ಜಾತಿ ಮತ್ತು ಉದ್ಯೋಗ ವಯಸ್ಸು ಯಾವುದೂ ಅಡ್ಡಿಯಾಗಲಾರದು. ಇಂಥ ನೈತಿಕ ಜೀವನ ಸಾಮಾಜಿಕ ಸಮತೆಯನ್ನು ಸಾಧಿಸುವುದು ಬಸವಮಾರ್ಗ. ಒಟ್ಟಾರೆ ಬಸವಣ್ಣನ ವೈಚಾರಿಕ ದೃಷ್ಟಿ. ಬೌದ್ಧಿಕ ವಿಕಾಸಕ್ಕೆ, ಧಾರ್ಮಿಕ ಸ್ವಾತಂತ್ರ್ಯಕ್ಕೆ, ಆಧ್ಯಾತ್ಮ ಪ್ರಗತಿಗೆ ಅಡಿಪಾಯ. ಕನ್ನಡ ಭಾಷೆ ಈತನ ವಚನಗಳಿಂದ ಅಪೂರ್ವವಾದ ಶಕ್ತಿ ಹಾಗೂ ಶ್ರೀಮಂತಿಕಯನ್ನು ಪಡೆಯಿತು.

**ಅಲ್ಲಮ ಪ್ರಭು:** 12ನೇ ಶತಮಾನದ ಧಾರ್ಮಿಕ ಮಹತ್ಸಾಧನೆಯ ಇತಿಹಾಸದಲ್ಲಿ ಪ್ರಧಾನ ವ್ಯಕ್ತಿ, ವಚನಕಾರರ ಜೀವನ ಸಿದ್ಧಾಂತದ ಸಾರವನ್ನೇ ತನ್ನ ಇರವಿನಲ್ಲಿರಿಸಿಕೊಂಡು ಶರಣ ಮಾರ್ಗಕ್ಕೆ ಗುರುವಾದ, ಅನುಭವ ಮಂಟಪದ ಅಧ್ಯಕ್ಷನಾದ, ಶೂನ್ಯ ಸಿಂಹಾಸನದ ದೊರೆಯಾದ. "ಮಾತೆಂಬುದು ಜ್ಯೋತಿರ್ಲಿಂಗ" ಆತನ ನಿಲುವುಗಳಲ್ಲೊಂದು, ಅಲ್ಲಮ ಡಾಂಭಿಕತೆ, ಅಂಧಶ್ರದ್ಧೆ, ಬಾಹ್ಯಾಡಂಬರ, ಅಜ್ಞಾನ, ಅಸತ್ಯ ವಿಕಾರತೆಗಳಿಗೆ ನಿಷ್ಠುರಿ. ಬಸವಣ್ಣನ ವಿಚಾರ ಕ್ರಾಂತಿಗೆ ತನ್ನ ಜ್ಞಾನ ವೈರಾಗ್ಯಗಳ ಕಾಂತಿಯನ್ನಿತ್ತು ಅದನ್ನು ಮುನ್ನಡೆಸಿದರು. 'ಗುಹೇಶ್ವರಾ' ಈತನ ವಚನಗಳ ಅಂಕಿತವಾಗಿದ್ದು, ವಚನಗಳು ಬೆಡಗಿನಿಂದ ಕೂಡಿದೆ, ಅಲ್ಲಮನ ವಚನಗಳು ಕ್ಲಿಷ್ಟವಾಗಿದ್ದರೂ ಅನುಭವದ ಸಂಪತ್ತಿನಿಂದಲೂ, ಅಲಂಕಾರ, ಉಪಮಾನ, ಒಗಟು, ಗಾದೆ ರೂಪದ ಮಾತುಗಳಿಂದಲೂ ಉಜ್ವಲ ಹಾಗೂ ಪರಿಣಾಮಕಾರಿಯಾಗಿದೆ. ಸಂಕೀರ್ಣ ವ್ಯಕ್ತಿತ್ವವನ್ನು ಪಡೆದು ಜೀವಿಸಿದ ಮಹಾಯೋಗಿ ಅಲ್ಲಮ.

**ಅಕ್ಕ ಮಹಾದೇವಿ:** ವ್ಯಕ್ತಿ ವೈಶಿಷ್ಟ್ಯ, ವಚನ ಮಹಿಮೆಯಿಂದ ಮೇರು ಶರಣೆ, ಕನ್ನಡದ ಮೊದಲ ಕವಯಿತ್ರಿ, 12ನೇ ಶತಮಾನದಲ್ಲಿ ಪ್ರಪ್ರಥಮವಾಗಿ 'ಸ್ತ್ರೀ' ಪ್ರತಿನಿಧಿಯಾಗಿ ಅಭಿವ್ಯಕ್ತಿಯಲ್ಲಿ ಪುರುಷ ಪ್ರಧಾನ ಸಮಾಜವನ್ನು ಪ್ರತಿಭಟಿಸಿದ ಮೊದಲ ಬಂಡಾಯ ಮಹಿಳೆ. "ಶರಣಸತಿ ಲಿಂಗಪತಿ" ಅವಳನಿಲುವುಗಳಲ್ಲೊಂದು. ಆಕೆಯ ವಚನಗಳ ಅಂಕಿತ "ಚನ್ನಮಲ್ಲಿಕಾರ್ಜುನ". ಬಲವಂತವಾಗಿ ಕೈ ಹಿಡಿದ

ಕೌಶಿಕರಾಜನನ್ನು ತಿರಸ್ಕರಿಸಿ ಸಾಂಪ್ರದಾಯಿಕ ಸಮಾಜದ ಮದುವೆಯ ನಿಯಮಗಳನ್ನು ಗಾಳಿಗೆ ತೂರಿ ಚನ್ನಮಲ್ಲಿಕಾರ್ಜುನ ನನ್ನ ಗಂಡ ಎಂದು ಲೋಕಕ್ಕೆ ಸಾರಿದವಳು. ಅಕ್ಕನ ಕಾವ್ಯದ ಗುಣಗಳೆಂದರೆ ಒಂದು ವೇದನೆ, ಮತ್ತೊಂದು ನಿವೇದನೆ. ಈಕೆಯ ವಚನಗಳಲ್ಲಿ ಸಮಾಜ ವಿಮರ್ಶೆಗಿಂತ ಸ್ವವಿಮರ್ಶೆಯೇ ಜಾಸ್ತಿ, ಸಾಮಾಜಿಕ ವ್ಯವಸ್ಥೆ ಮತ್ತು ರಾಜ ಪ್ರಭುತ್ವಗಳೆರಡನ್ನೂ ಧಿಕ್ಕರಿಸಿ ನಿಂತು ಜೀವನ ಪೂರ್ತಿ ಹೋರಾಟದಲ್ಲೇ ಮುಳುಗಿ ವಚನ ಸಾಹಿತ್ಯಕ್ಕೆ ಹಾಗೂ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿರುವ ಅಕ್ಕನ ವಚನಗಳು ಕನ್ನಡದ ಸ್ತ್ರೀ ಸಂವೇದನಾ ಅಭಿವ್ಯಕ್ತಿಯ ಮೊದಲ ದಾಖಲೆಗಳು. "ಬೆಟ್ಟದ ಮೇಲೊಂದು ಮನೆಯ ಮಾಡಿ" ವಚನವು ಶಕ್ತಿಶಾಲಿಯಾದ ಚಿಕ್ಕ ಭಾವಗೀತೆಯಾಗಿದ್ದು ಚಿರಂತನ ಸ್ಫೂರ್ತಿಯ ಚಿಲುಮೆಯಾಗಿದೆ. ತ್ರಿಪದಿಯಲ್ಲಿ ರಚಿತವಾದ ಅಕ್ಕನ ಯೋಗಾಂಗತ್ರಿವಿಧಿ" ಚಿಕ್ಕ ಕೃತಿಯಾಗಿದ್ದು 67 ತ್ರಿಪದಿಗಳಲ್ಲಿ ತಾತ್ವಿಕ ವಿಷಯದ ಜೊತೆಗೆ ವೈಯುಕ್ತಿಕವಾದ ಅಂಶಗಳನ್ನು ಒಳಗೊಂಡಿದೆ. ಅಕ್ಕನ ಅನುಭಾವ ಸಂಪತ್ತನ್ನು ಸಹಜ ಸಾಹಿತ್ಯ ರೂಪಕ್ಕೆ ತಂದ ಚೆಲುವಾದ ಕೃತಿ. ಅವಳ ತತ್ತ್ವ ಸಂಗ್ರಹ ಶಕ್ತಿ, ಗುರು ಭಕ್ತಿ ಇಲ್ಲಿ ಎದ್ದು ಕಾಣುತ್ತದೆ.

**ಸಿದ್ಧರಾಮ:** ಪ್ರಭುದೇವ, ಚನ್ನಬಸವಣ್ಣರ ಅನುಗ್ರಹದಿಂದ ಜ್ಞಾನಿಯಾದವನು. ಕರ್ಮಯೋಗಿ 'ಕಪಿಲಸಿದ್ಧ ಮಲ್ಲಿಕಾರ್ಜುನ' ಅಂಕಿತದಿಂದ ವಚನ ಬರೆದರೆ, ಬಸವಸ್ತೋತ್ರ ತ್ರಿವಿಧಿ, ಅಷ್ಟಾವರಣ ಸ್ತೋತ್ರ ತ್ರಿವಿಧಿ, ಕಾಲಜ್ಞಾನ ಹಾಗೂ ಮಂತ್ರಗೀಪ್ಯ ತ್ರಿವಿಧಿಗಳನ್ನು 'ಯೋಗಿನಾಥ' ಅಂಕಿತದಲ್ಲಿ ಬರೆದಿದ್ದಾನೆ. "ಭಕ್ತನಾದರೆ ಬಸವಣ್ಣನಾಗಬೇಕು, ಜಂಗಮನಾದರೆ ಪ್ರಭುವಿನಂತಾಗಬೇಕು, ಬೋಗಿಯಾದರೆ ನಮ್ಮ ಗುರು ಚನ್ನಬಸವಣ್ಣನಂತಾಗಬೇಕು. ಬೋಗಿಯಾದರೆ ನಮ್ಮ ಗುರು ಚನ್ನಬಸವಣ್ಣನಂತಾಗಬೇಕು. ಯೋಗಿಯಾದರೆ ನನ್ನಂತಾಗಬೇಕು" ಈ ಬಗೆಯ ವಚನಗಳಲ್ಲಿ ತನ್ನ ಮತ್ತು ಇತರರ ಗುಣವಿಶೇಷಗಳನ್ನು ತಿಳಿಸಿದ್ದಾನೆ.

**ಚನ್ನಬಸವಣ್ಣ:** ಬಸವಣ್ಣನ ಸೋದರಳಿಯನಾದ ಈತ 'ಷಟ್ಸ್ಥಲ ವಚನ' ಹಾಗೂ ಇತರ ವಚನಗಳ ಜೊತೆಗೆ "ಕರಣ ಹಸುಗೆ" ಮಿಶ್ರಾರ್ಪಣ, ಮಂತ್ರಗೋಪ್ಯ, ಕಾಲಜ್ಞಾನ ಎಂಬ ಕೃತಿಗಳನ್ನು ರಚಿಸಿದ್ದಾನೆ. ಈತನ ವಚನಗಳು ಶೈವಾಚಾರಕ್ಕೆ ಆಧಾರ ಗ್ರಂಥದಂತಿವೆ. 'ಮಹಾಜ್ಞಾನಿ' ಎಂದು ಅಲ್ಲಮನಿಂದ ಹೊಗಳಿಸಿಕೊಂಡ ಶರಣ, ಜ್ಞಾನನಿಷ್ಟೆ ಖಂಡಿತವಾದಿ.

**ಅಂಬಿಗರ ಚೌಡಯ್ಯ:** ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಲ್ಲಿ ಅನುಭಾವಿ, ತನ್ನ ಕಾಯಕ ಮತ್ತು ವ್ಯಕ್ತಿನಾಮವಾದ "ಅಂಬಿಗರ ಚೌಡಯ್ಯ" ಎಂಬುದೇ ಈತನ ವಚನಗಳ ಅಂಕಿತ. ಈತನ ವಚನಗಳಲ್ಲಿ ಸಮಕಾಲೀನ ಸಮಾಜ ವಿಡಂಬನೆಯ ವ್ಯಗ್ರದೃಷ್ಟಿ, ನಿಷ್ಟುರ ಪ್ರಕೃತಿಯ ಗ್ರಾಮ್ಯ ಮನೋಧರ್ಮದ ವಚನಕಾರ ಮಾತಿನ ಬಹುಭಾಗ ಹರಿತವಾದದ್ದು. ಮಾದಾರ ಚನ್ನಯ್ಯ, ಮಡಿವಾಳ ಮಾಚಯ್ಯ, ಆಯ್ದಕ್ಕಿ ಮಾರಯ್ಯ, ಹಡಪದ ಅಪ್ಪಣ್ಣ, ಉರಿಲಿಂಗಪೆದ್ದಿ, ಬಹುರೂಪಿ ಶಿವಯ್ಯ, ಡೋಹರ ಕಕ್ಕಯ್ಯ, ಮೋಳಿಗೆ ಮಾರಯ್ಯ, ಏಕಾಂತ ರಾಮಯ್ಯ, ಹೆಂಡದ ಮಾರಯ್ಯ, ನುಲಿಯ ಚಂದ್ರಯ್ಯರಂತಹ ಶರಣರಲ್ಲಿ ಈ ಹೆಸರುಗಳು ಅವರವರ ಕಾಯಕವನ್ನು ಸೂಚಿಸುತ್ತದೆ. ಅವರ ಕೆಲವು ವಚನಗಳಲ್ಲಿ ಕಾಯಕಕ್ಕೆ ವಿಶಿಷ್ಟವಾದ ಪ್ರತಿಮೆಗಳು ಅವರ ಅನುಭವಗಳನ್ನು ಅನಿಸಿಕೆಗಳನ್ನು ಅಭಿವ್ಯಕ್ತಿಗೊಳಿಸಿರುವ ಬಗೆ ಕಂಡುಬರುತ್ತದೆ. ಮೋಳಿಗೆ ಮಾರಯ್ಯನ ಹೆಂಡತಿ ಮಹಾದೇವಿ, ಬಿಜ್ಜಳದೇವಿ ಕಾಳವ್ವೆ, ನೀಲಮ್ಮ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ ಸೇರಿದಂತೆ ಸೂಳೆ ಸಂಕವ್ವನಂಥವರಿಗೆ ವಚನ ರಚಿಸುವ ಮುಕ್ತ ಸ್ವಾತಂತ್ರ್ಯವನ್ನು ಅನುಭವ ಮಂಟಪ

ನೀಡಿತ್ತು ಎಂಬುದು ಸ್ವಾಗತಾರ್ಹವಾದದ್ದು, ಹೀಗೆ ವಚನ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲೀ ಆತ್ಮ ವಿಮರ್ಶೆಯ ಮಾಧ್ಯಮವಾಗಿ ಸ್ವತಂತ್ರ್ಯವಾಗಿ ಬೆಳೆದು ವಿಜೃಂಭಿಸಿ ಮುಂದಿನ ಸಾಹಿತ್ಯ ಪರಂಪರೆ ಮೇಲೆ ಪ್ರಭಾವ ಬೀರಿ ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲದೆ ವಿಶ್ವ ಸಾಹಿತ್ಯದಲ್ಲಿ ಒಂದು ಅವಿಭಾಜ್ಯ ಅಂಗವಾಗಿದೆ. ರಾಜಾಶ್ರಯವನ್ನು ಧಿಕ್ಕರಿಸಿ ಸ್ವಂತಿಕೆಯಿಂದ ಮೆರೆದ ಸಾಹಿತ್ಯ ವಚನ ಸಾಹಿತ್ಯವಾಗಿದೆ. 'ಕಾಯಕವೇ ಕೈಲಾಸ' ಎಂಬುದು ಶ್ರಮ ಸಂಸ್ಕೃತಿಯ ಪ್ರತೀಕವಾಗಿದೆ.

**ಹರಿಹರ (ಕಾಲ 13ನೇ ಶತಮಾನ):** ಕನ್ನಡ ಸಾಹಿತ್ಯದ ನೂತನ ಯುಗ ಪ್ರವರ್ತಕ. ಕನ್ನಡದಲ್ಲಿ ರಗಳೆ ಕಾವ್ಯ ಪ್ರಕಾರವನ್ನು ಜೀವಂತಗೊಳಿಸಿದ ಸುಪ್ರಸಿದ್ಧ ಮಹಾಕವಿ. ಶಿವನೆ ತನ್ನ ಸರ್ವಸ್ವವೆಂದು ಶಿವಶರಣರ ಸಂಕುಳವೆ ತನ್ನ ಬಳಗೆವೆಂದು, ಪುರಾತನರೆ ತನ್ನ ಪರುಮಾರಾಧ್ಯರೆಂದು ನಂಬಿ ನೆಚ್ಚಿ ಹಂಪೆಯ ವಿರೂಪಾಕ್ಷನ ಸಾನಿಧ್ಯದಲ್ಲಿ ಬದುಕು ಕಳೆದ ಪರಮ ಭಕ್ತಿಯ ಶಕ್ತಿಕವಿ. ಬಸವಣ್ಣ ಹಾಗೂ ಶರಣರೂ ಬೆಳಗಿಸಿದ ಕ್ರಾಂತಿಯ ದಾರಿಯಲ್ಲಿ ನಡೆದು ತನ್ನ ಪ್ರತಿಭಾ ಸೃಷ್ಠಿಯಿಂದ ಹರಿಹರ ಮಾರ್ಗ ಎಂಬುದನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿರ್ಮಾಣ ಮಾಡಿದನು. 'ಗಿರಿಜಾ ಕಲ್ಯಾಣ' ಎಂಬ ಪ್ರೌಢ ಚಂಪೂ ಕೃತಿಯನ್ನು ಮೊದಲುಗೊಂಡು ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ವಿಶೇಷವಾಗಿ 106 ಜನ ಶಿವಭಕ್ತರ "ಶಿವಶರಣ ರಗಳೆಗಳು" ರಚಿಸಿದ್ದಾನೆ. ಭಕ್ತಿರಸಕ್ಕೆ ಸರಿಯಾದ ಛಂದೋರೂಪ ರಗಳೆಯನ್ನು ವೃದ್ಧಿಪಡಿಸಿದ "ಜಟಿಕುಳಗಳನ್ನು ಬಿಟ್ಟ, ವಸ್ತುವಿನ ಆಯ್ಕೆ ದೃಷ್ಠಿಯಿಂದ ಹರಿಹರ ನಿಜಕ್ಕೂ ಕ್ರಾಂತಿಕಾರಿ ಕವಿ ಚಂಪೂವಿನ ಚಕ್ರಬಂಧನದಲ್ಲಿ ತೊಳಲುತ್ತಿದ್ದ ಕಾವ್ಯತ್ವನ್ನು ಬಿಡಿಸಿ ಅದು ಜನ ಸಾಮಾನ್ಯರಿಗೆ ನಿಲುಕುವಂತೆ ಮಾಡುವಲ್ಲಿ ಯಶಸ್ವಿಯಾದ. ಜನಪ್ರಿಯ ಶಿವಶರಣರ ವಚನಗಳ ಅನಂತರ ಸಲ್ಲುವ ಪ್ರಮುಖ ಸ್ಥಾನ ಈತನ ರಗಳೆಗಳೆ.

**ರಾಘವಾಂಕ:** ಹರಿಹರನ ಸೋದರಳಿಯ, ಜೊತೆಗೆ ಪರಮ ಶಿಷ್ಯ. 'ಷಟ್ಪದಿಯ ಬ್ರಹ್ಮ' ಬಿರುದಾಂಕಿತ. ಲೋಕ ಪ್ರಿಯ 'ಹರಿಶ್ಚಂದ್ರ ಚಾರಿತ್ರ್ಯ' ಕೃತಿಯನ್ನು ಮೊದಲುಗೊಂಡು, ಸೋಮನಾಥ ಚಾರಿತ್ರ್ಯ, ಸಿದ್ಧರಾಮ ಚಾರಿತ್ರ್ಯ, ವಿರೇಶ ಚರಿತೆ, ಶರಭ ಚಾರಿತ್ರ್ಯ ಮತ್ತು ಹರಿಹರ ಮಹತ್ವ ಕೃತಿಗಳನ್ನು ರಚಿಸಿದ್ದು ಶರಭ ಚಾರಿತ್ರ್ಯ ಮತ್ತು ಹರಿಹರ ಮಹತ್ವಗಳು ದೊರೆತಿಲ್ಲ. ರಾಘವಾಂಕ ಜೀವಿಸಿದ್ದ ಕಾಲ ಕನ್ನಡ ಸಾಹಿತ್ಯ ಬೆಳವಣಿಗೆಯ ದೃಷ್ಠಿಯಿಂದ ಮಹತ್ವದ್ದಾಗಿದೆ. ಅದು ಪೂರ್ವದ ಹಳಗನ್ನಡದೊಂದಿಗೆ ಹೊಸಗನ್ನಡ ರೂಪಗಳು ಕಾವ್ಯರಂಗವನ್ನು ಪ್ರವೇಶಿದಿದ ಕಾಲ. ಬಸವಣ್ಣನ ತರುವಾಯದ ಪೀಳಿಗೆಯ ಪಂಡಿತತ್ರಯರಲ್ಲಿ ರಾಘವಾಂಕ–ಹರಿಹರರ ಜೊತೆಗೆ ಕೆರೆಯ ಪದ್ಮರಸನೂ ಬರುತ್ತಾನೆ. ಈತನ ಕೃತಿ 'ದೀಕ್ಷಾ ಬೋಧೆ'.

**ಹರಿಹರ ಯುಗದ ನೇಮಿ–ರುದ್ರ–ಜನ್ನ–ಆಂಡಯ್ಯ–ಕೇಶಿರಾಜಾದಿಗಳು:** ಬಸವಾದಿ ಶರಣರನ್ನು ಸೇರಿದಂತೆ ಬಸವ/ಹರಿಹರಯುಗದಲ್ಲಿ, ಹರಿಹರ–ರಾಘವಾಂಕರ ತರುವಾಯ ನೇಮಿಚಂದ್ರ, ರುದ್ರಭಟ್ಟ, ಅಗ್ಗಳ, ಆಚಣ್ಣ, ಕವಿಕಾಮ, ಬಂಧುವರ್ಮ, ದೇವಕವಿ, ಪಾರ್ಶ್ವಪಂಡಿತ, ಜನ್ನ, ಸೋಮರಾಜ, 2ನೇ ಗುಣವರ್ಮ, ಕಮಲಭವ, ಆಂಡಯ್ಯ, ಮಲ್ಲಿಕಾರ್ಜುನ, ಮಹಾಕುಲಕವಿ, ಕೇಶೀರಾಜ, ಕುಮುದೇಂದ್ರ, ನರಹರಿತೀರ್ಥ, ರಟ್ಟಕವಿ, ಚೌಂಡರಸ, ಹಸ್ತಿಮಲ್ಲ, ಪಾಲ್ಕುರಿಕೆ ಸೋಮನಾಥ, ನಾಗರಾಜ, ವೃತ್ತವಿಲಾಸ ಮಂಗರಾಜ, ಭೀಮಕವಿ, ಮಧುರ, ಪದ್ಮಣಾಂಕ, ಆಯತವರ್ಮ ಪುಲಿಗೆರೆಯ ಸೋಮನಾಥ ಸೇರಿದಂತೆ

ನಲ್ವತ್ತಕ್ಕೂ ಹೆಚ್ಚು ಕವಿಗಳು ಕಾಣಸಿಗುತ್ತಾರೆ. ಕನ್ನಡ ಸಾಹಿತ್ಯ ಬೆಳವಣಿಗೆಗೆ ಒಂದಲ್ಲ ಒಂದು ರೀತಿಯಲ್ಲಿ ಪಾತ್ರವಹಿಸಿದ್ದಾರೆ.

**ನೇಮಿಚಂದ್ರ (ಕಾಲ – 12ನೇ ಶತಮಾನ):** 'ಲೀಲಾವತೀ ಪ್ರಬಂಧಂ' ಮತ್ತು 'ನೇಮಿನಾಥ ಪುರಾಣ'ಗಳೆಂಬ ಚಂಪೂ ಕಾವ್ಯ ರಚಿಸಿದ ಪ್ರೌಢಕವಿ. ಲೀಲಾವತಿ ಪ್ರಬಂಧ 14 ಆಶ್ವಾಸವನ್ನು ಒಳಗೊಂಡ ಪ್ರೇಮ ಕಥೆಯಾಗಿದೆ. ಕಥೆಕಿರಿದಾಗಿದ್ದು ವರ್ಣನೆಯ ಮಹಾಪೂರವೇ ಹರಿದಿದೆ. ನೇಮಿನಾಥ ಪುರಾಣ 22ನೇ ತೀರ್ಥಂಕರನಾದ ನೇಮಿಜಿನೇಶ್ವರನ ಪುಣ್ಯ ಚರಿತ್ರೆ ಕಾವ್ಯಧರ್ಮ, ಧರ್ಮಗಳೆರಡನ್ನು ಒಳಗೊಂಡಿರುವ ಶ್ರೇಷ್ಠ ಕಾವ್ಯವೆನ್ನಬಹುದು. ಇದರಲ್ಲಿ ಕೌರವ–ಪಾಂಡವರ ಕಥೆ, ಕೃಷ್ಣ ಚರಿತ್ರೆ ಮತ್ತು ಜಿನೇಶ್ವರನ ಕಥೆ ಮೂರನ್ನು ಸೇರಿಸಿ ಹೇಳಲು ಹೊರಟು ಕೃಷ್ಣ ಕಂಸರನ್ನು ಕೊಂದ ವೃತ್ತಾಂತಕ್ಕೆ ನಿಂತುಹೋಗಿದೆ. ಆದ್ದರಿಂದಲೇ ಇದಕ್ಕೆ 'ಅರ್ಧನೇಮಿ ಪುರಾಣ' ಎಂದು ಕರೆಯುವ ವಾಡಿಕೆಯಿದೆ.

**ರುದ್ರ ಭಟ್ಟ (ಕಾಲ ಸು. 1200):** ಜಗನ್ನಾಥ ವಿಜಯ ಮತ್ತು 'ರಸ ಕಲಿಕೆ'ಗಳ ಗ್ರಂಥ ಕರ್ತೃ ವೈದಿಕ ಪುರಾಣವೊಂದನ್ನು ಕನ್ನಡ ಕಾವ್ಯ ರೂಪವಾಗಿ ಕೊಟ್ಟವರಲ್ಲಿ ರುದ್ರ ಭಟ್ಟ ಮೊದಲಿಗ ಜಗನ್ನಾಥ ವಿಜಯವು ಕೃಷ್ಣನ ಚರಿತ್ರೆಯನ್ನು ಹೇಳುವ ಕಾವ್ಯ. ರಸಕಲಿಕೆ ಅಲಂಕಾರ ಗ್ರಂಥವಾಗಿದೆ.

**ಜನ್ನ (ಕಾಲ 13ನೆಯ ಶತಮಾನ):** ಈತನ ಉಪಲಬ್ಧ ಕೃತಿಗಳು 'ಅನಂತನಾಥ ಪುರಾಣ', 'ಯಶೋಧರ ಚರಿತೆ' ಹಾಗೂ 'ಅನುಭವ ಮುಕುರಂ', ಚಾವುಂಡರಾಯನ ಪುರಾಣದಲ್ಲಿದ್ದ 70 ಸಾಲಿನ ತೀರ್ಥಂಕರರ ಕಥೆ. 'ಅನಂತನಾಥ ಪುರಾಣ'ದಲ್ಲಿ 1400 ಪದ್ಯಗಳಷ್ಟು ಧೀರ್ಘವಾಗಿದ್ದ ಮಹಾಕಾವ್ಯ ಲಕ್ಷಣಗಳಿಂದ ಕೂಡಿದ ಬೃಹತ್ ಗ್ರಂಥ. ಚಂಡಶಾಸನ ಉಪಆಖ್ಯಾಯನ ಕಾವ್ಯದಲ್ಲಿ ಚಲುವಿನಕೊಳ್ಳ, 'ಯಶೋಧರ ಚರಿತೆ' ಜೈನನೋಂಪಿಯ ಕಥೆ 310 ಕಂದ ಪದ್ಯಗಳಿಂದ ಎರಕಗೊಂಡಿದೆ. ಯಶೋಧರಾ–ಅಮೃತಮತಿ–ಅಷ್ಟಾವಂಕರ ಕಥೆಯಾಗಿದೆ. ದಾಂಪತ್ಯ ಮತ್ತು ವಿಷಮ ಪ್ರೇಮ ವಸ್ತುವನ್ನು ಚಿತ್ರಿಸುವುದರೊಂದಿಗೆ ಮನುಷ್ಯನ ಬಿಕ್ಕಟ್ಟನ್ನು ಚಿತ್ರಿಸುವ ಜನ್ನ ಕನ್ನಡದ ಅಪರೂಪದ ಕವಿ, ಅವರ 'ಅನುಭವ ಮುಕುರಂ" ಕಾಮಶಾಸ್ತ್ರದ ಕೃತಿ.

**ಆಂಡಯ್ಯ (ಕಾಲ – 13ನೆಯ ಶತಮಾನ):** ಈತನ 'ಕಬ್ಬಿಗರ ಕಾವಂ' ಕನ್ನಡ ಸಾಹಿತ್ಯ ಬೆಳವಣಿಗೆಯಲ್ಲಿ ಒಂದು ವಿಶಿಷ್ಟ ಕೃತಿ. ತಾಯಿ, ತಾಯಿ ನೆಲ, ತಾಯಿ ನುಡಿ ಬಗ್ಗೆ ಅಪಾರ ಅಭಿಮಾನವುಳ್ಳ ಜೈನಕವಿ. ಸಂಸ್ಕೃತವನ್ನು ತೊರೆದು ಕನ್ನಡ ಬದುಕಲಾರದೆಂಬ ವಿದ್ವಾಂಸರ ಮತವನ್ನು ಖಂಡಿಸಿ, ಅಚ್ಚಗನ್ನಡದಲ್ಲಿ ಕೇವಲ ತದ್ಭವ ಪದಗಳನ್ನು, ದೇಸೀ ನುಡಿಗಳ ಪ್ರಯೋಗದಿಂದ ಕಾವ್ಯ ರಚನೆ ಗೈದಿದ್ದಾನೆ. ಇದೊಂದು ಶೃಂಗಾರಮಯ ಖಂಡಕಾವ್ಯ. ಶೈಲಿಸರಳ, ಸಹಜ, ಸುಂದರ, ಸುಲಲಿತ, ಕನ್ನಡ ನಾಡು ನುಡಿಯನ್ನು ಬಾಯ್ತುಂಬ ಹೊಗಳಿ ಕನ್ನಡದ ಅಭಿಮಾನವನ್ನು ಕೆಚ್ಚಿನಿಂದ ಹಿಡಿದು ಮುನ್ನುಗ್ಗಿದ ಒಬ್ಬ ಸತ್ಕವಿ.

**ಕೇಶೀರಾಜ:** ಕನ್ನಡದ ಪ್ರಸಿದ್ಧ ವೈಯಾಕರಣಿ. "ಶಬ್ದಮಣಿ ದರ್ಪಣಂ" ಎಂಬ ಹಳಗನ್ನಡ ವ್ಯಾಕರಣ ಗ್ರಂಥದ ಕರ್ತೃ. ಕನ್ನಡದಲ್ಲಿ ಸ್ವತಂತ್ರವಾಗಿ ಹುಟ್ಟಿದ ವ್ಯಾಕರಣ ಕೃತಿಗಳಲ್ಲಿ ಮೊದಲನೆಯದು ಸೂತ್ರಗಳು, ಕಂದ ಪದ್ಯದಲ್ಲಿದ್ದು, ವೃತ್ತಿಯು ಗದ್ಯದಲ್ಲಿದೆ. ಹಳಗನ್ನಡ ಭಾಷೆಯ ಸ್ಥಿತಿಗತಿಗಳು ಹೇಗಿದ್ದವೆಂಬುದನ್ನು ತಿಳಿಯಬಹುದು. ನಾಮ, ಸಮಾಸ, ಸದ್ಧಿತ, ಧಾತು, ಆಖ್ಯಾತ, ಅಪ್ರಭಂಶ, ಅಧ್ಯಯ ಎಂಬ 8 ಪ್ರಕರಣಗಳಿವೆ. 2ನೇ ನಾಗವರ್ಮನ ಶಬ್ಧಸ್ಮೃತಿ, ಭಾಷಾ ಭೂಷಣ ಆಕರ, ಉದಾಹರಣೆಗಾಗಿ ಪಂಪ

ಮೊದಲುಗೊಂಡ ಹಳಗನ್ನಡ ವಿವಿಧ ಕವಿಗಳ ಪದ್ಯಗಳನ್ನು ಬಳಸಿಕೊಂಡಿದ್ದಾನೆ. ಭಾಷೆಯ ಬೆನ್ನೆಲುಬು ವ್ಯಾಕರಣವಾಗಿದ್ದು ಒಬ್ಬ ಶ್ರೇಷ್ಠ ಶಾಸ್ತ್ರಕಾರನಾಗಿ ಕನ್ನಡ ಸಾಹಿತ್ಯ ಬೆಳವಣಿಗೆಯಲ್ಲಿ ಕಂಡುಬರುತ್ತಾರೆ.

**ಕುಮಾರವ್ಯಾಸ ಯುಗ:** 15ನೇ ಶತಮಾನದಿಂದ 19ನೇ ಶತಮಾನದ ಕೊನೆಯವರೆಗೆ ಅಂದರೇ ಆಧುನಿಕ ಕಾಲದವರೆಗೆ ಈ ಯುಗದ ವಿಸ್ತಾರವಿದೆ. ಎಲ್ಲ ಮತ, ಎಲ್ಲ ತರದ ಸಾಹಿತ್ಯ ಪ್ರಕಾರಶಾಸ್ತ್ರ ಕಾವ್ಯ ರಚನೆಯ ಮೂಲಕ ಇದು ಹಿಂದಿನ ಯುಗಗಳಿಗಿಂತ ಹೆಚ್ಚಾಗಿ ಸಂಮಿಶ್ರಿತವಾಗಿದೆ. ಷಟ್ಪದಿ, ಸಾಂಗತ್ಯ, ತ್ರಿಪದಿ, ಕೀರ್ತನೆ ಇವುಗಳ ಪ್ರಸಾರವು ಈ ಯುಗದಲ್ಲಿ ಹೆಚ್ಚಿದೆ. ಚಂಪೂರೂಪವು ಮತ್ತೆ ತಲೆಯೆತ್ತಿದೆ. ವಿಜಯನಗರದ ಅರಸರ ಮತ್ತು ಮೈಸೂರು ಒಡೆಯರ ಆಶ್ರಯದಲ್ಲಿ ಬೇರೆ ಬೇರೆ ಮಾಂಡಲೀಕರ ಆಶ್ರಯದಲ್ಲಿ ಈ ಯುಗದ ಸಾಹಿತ್ಯ ಬೆಳವಣಿಗೆ ಕಂಡಿದೆ. ಈ ಯುಗದ ಪ್ರಾರಂಭ ಕಾಲದ ಮಹಾ ಕವಿಯಾಗಿ ದೇಸಿ ನಿಷ್ಠತೆಯ ಶ್ರೇಷ್ಠ ಪ್ರತಿನಿಧಿಯಾಗಿ ಕುಮಾರವ್ಯಾಸ ಗೋಚರಿಸಿದ್ದಾನೆ.

**ಕುಮಾರ ವ್ಯಾಸ (ಕಾಲ ಸು– 1400):** ರೂಪಕ ಸಾಮ್ರಾಜ್ಯದ ಚಕ್ರವರ್ತಿ ಬಿರುದಾಂಕಿತ 'ಕರ್ಣಾಟ ಭಾರತ ಕಥಾಮಂಜರಿ' ಮಹಾಕಾವ್ಯದ ಕರ್ತೃ. 'ಪಂಪ ಕಲಿತವರ ಕಲ್ಪವೃಕ್ಷ ಕುಮಾರವ್ಯಾಸ ಕಲಿಯದವರ ಕಾಮಧೇನು'. ವೇದ, ಇತಿಹಾಸ, ಪುರಾಣಾದಿ ಶಾಸ್ತ್ರಗಳಲ್ಲಿ ಬಲ್ಲಿದ. ಕಾವ್ಯ ಭಾಮಿನೀ ಷಟ್ಪದಿಲ್ಲಿದೆ. 10 ಪರ್ವಗಳಿದ್ದು ಮೊದಲ 5 ಪರ್ವಗಳನ್ನು ಆದಿ ಪಂಚಕವೆಂದು ಕೊನೆಯ 5 ಪರ್ವಗಳನ್ನು ಯುದ್ಧ ಪಂಚಕವೆಂದು ಕರೆದಿದ್ದಾನೆ. ಸಂಸ್ಕೃತ ವ್ಯಾಸ ಭಾರತ ಆಕರಗ್ರಂಥವಾಗಿದೆ. ಕೃಷ್ಣ ಕಥೆ ಎಂದು ತನ್ನ ಕಾವ್ಯೋದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ. ಕಥಾ ಸಂವಿಧಾನದಲ್ಲಿ ಏಕ ಸೂತ್ರತೆಯಿದೆ, ವರ್ಣನೆಗಳಲ್ಲಿ ಅಪೂರ್ವವಾದ ಕಲ್ಪನಾ ವಿಲಾಸವಿದೆ. ಪಾತ್ರಗಳ ಚಿತ್ರಣದಲ್ಲಿ ಅವುಗಳ ಮನಹೊಕ್ಕು ಅವುಗಳ ಸಮಗ್ರ ವ್ಯಕ್ತಿತ್ವವನ್ನು ಪರಿಚಯಿಸಿಕೊಡುವಲ್ಲಿ ಕವಿ ಪ್ರತಿಭೆ ಅಪೂರ್ವವಾಗಿದೆ. ಕನ್ನಡ ಭಾಷೆಯ ಅಂತಃಸಾರವನ್ನೆಲ್ಲಾ ಕಾವ್ಯದಲ್ಲಿ ಹಿಡಿದಿದ್ದಾನೆ. "ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು" ಎಂಬ ಕುವೆಂಪು ವಾಣಿ ಅಕ್ಷರ ಸಹ ಸತ್ಯ. 'ಐರಾವತ' ಅರ್ಜುನನ ಪ್ರತಾಪವನ್ನು ಹೊಗಳಿರುವ ಮತ್ತೊಂದು ಪೌರಾಣಿಕ ಕೃತಿಯಾಗಿದೆ.

**ಲಕ್ಷ್ಮೀಶ (ಕಾಲ–ಸು 1550):** 'ಜೈಮಿನಿ ಭಾರತ'ದ ಕೃತಿ ಕರ್ತೃ, ಉಪಮಾಲೋಲಾ ಬಿರುದಾಂಕಿತ ಲಕ್ಷ್ಮೀಶನ ಕೃತಿ. ಸಂಸ್ಕೃತ ಜೈಮಿನಿ ಭಾರತದ ಸಂಗ್ರಹ ರೂಪದ ಕನ್ನಡಾನುವಾದವಾಗಿದೆ. ವೀರರಸ ಪ್ರಧಾನವಾಗಿದ್ದರೂ ಮಿತವಾಗಿ ಭಕ್ತಿ ಮತ್ತು ಶೃಂಗಾರ ವರ್ಣನೆಗಳನ್ನು ಭಾಮಿನೀ ಷಟ್ಪದಿಯಲ್ಲಿ ಪರಿಣಾಮಕಾರಿ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾನೆ ಕುಮಾರವ್ಯಾಸನಂತೆ ಕೃಷ್ಣಭಕ್ತಿ ಇಲ್ಲಿ ಪ್ರಧಾನವಾಗಿದೆ.

**ಚಾಮರಸ (ಕಾಲ–ಸು 1430):** ವಚನಕಾರ ಅಲ್ಲಮ ಪ್ರಭುವಿನ ಜೀವನ ಸಾಧನೆ, ಸಿದ್ಧಿ ಚಿತ್ರಣವು ಕಾವ್ಯದ ವಸ್ತುವಾಗಿದ್ದು ವೀರಶೈವ ಕವಿಯಾದ ಈತ ಭಾಮಿನಿಷಟ್ಪದಿಯಲ್ಲಿ "ಪ್ರಭುಲಿಂಗಲೀಲೆ"ಯನ್ನು ರಚಿಸಿದ್ದಾನೆ. ಈ ಕಾವ್ಯ ತೆಲುಗು, ತಮಿಳು, ಮರಾಠಿ, ಸಂಸ್ಕೃತಗಳಿಗೆ ಭಾಷಾಂತರವಾಗಿದೆ. ಕಾವ್ಯದಲ್ಲಿ ಕಲ್ಪನಾಶಕ್ತಿ, ಶಬ್ಧ ಸಂಪತ್ತುಗಳ ಸಹಜ ವಿಲಾಸ ಕಂಡುಬರುತ್ತದೆ. ಸನ್ನಿವೇಶ ರಚನೆ, ಪಾತ್ರ ಚಿತ್ರಣದಲ್ಲಿ ಮಹಾಕವಿಯಲ್ಲಿರಬಹುದಾದ ಕಾವ್ಯ ಪ್ರತಿಭೆ ಮಿನುಗುತ್ತದೆ. ಶೈಲಿ ಸರಳವಾದರೂ ಶಿಥಿಲವಾಗಿಲ್ಲ. ಕಾವ್ಯಧರ್ಮ ಹಾಗೂ ಧರ್ಮ ಎರಡೂ ಸಮರಸ ಹೊಂದಿದೆ. ಕನ್ನಡ ಸಾಹಿತ್ಯ ಬೆಳವಣಿಗೆಯ ದೃಷ್ಠಿಯಿಂದ ನೋಡುವುದಾದರೇ ಮಹಾತ್ಮರ ಜೀವನ ಚರಿತ್ರೆಯನ್ನು ಕಾವ್ಯ ರೂಪದಲ್ಲಿ ಹೇಗೆ ಬರೆಯಬೇಕೆಂಬುದಕ್ಕೆ

ಪ್ರಭುಲಿಂಗಲೀಲೆ ಉತ್ತಮ ನಿದರ್ಶನ. ಕಥಾಕೇಂದ್ರ 'ಮಾಯೆ' ಅಲ್ಲಮನನ್ನು ಗೆಲ್ಲಲು ಬಂದು ಸೋತು ಹೋಗುವುದಾಗಿದೆ.

**ಷಡಕ್ಷರಿ (ಕಾಲ ಸು 1655):** 'ರಾಜಶೇಖರ ವಿಳಾಸ', ಶಬರ ಶಂಕರವಿಳಾಸ, ಬಸವರಾಜ ವಿಜಯ ಎಂಬ ಚಂಪೂಕೃತಿಗಳ ಕರ್ತೃ. ಚಂಪೂ ಕವಿಗಳ ಸಂಪ್ರದಾಯವನ್ನು ಅನುಸರಿಸಿ ಮಹಾಕಾವ್ಯದ ಅಷ್ಟಾದಶ ವರ್ಣನೆಗಳನ್ನು ತಂದಿದ್ದಾನೆ ಹಾಗಾಗಿ ಕಥೆ ಕುಂಠಿತವಾಗಿದೆ ಆದರೂ ಅಲ್ಲಲ್ಲಿ ಕೆಲವು ವರ್ಣನೆಗಳು ಸಹಜಾಕರ್ಷವಾಗಿದೆ ಶೃಂಗಾರ, ಕರುಣ ಹಾಗೂ ರಸಗಳನ್ನು ಮುಖ್ಯವಾಗಿ 'ರಾಜಶೇಖರ ವಿಳಾಸ' ಹೊಂದಿದೆ ತಿರುಕೊಳವನಾಚಿಯ ಪ್ರಲಾಪ ಪ್ರಸಂಗದಲ್ಲಿ ಕರಣಾರಸ ಮಡುಗಟ್ಟಿದೆ.

**ಪುರಂದರ – ಕನಕದಾಸರು (ಕಾಲ ಸು. 1550):** ಈರ್ವರು ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳು ಪುರಂದರದಾಸರು "ಕರ್ನಾಟಕ ಸಂಗೀತ ಪಿತಾಮಹ" ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಕನ್ನಡ ಸಾಹಿತ್ಯಕ್ಕೆ ಸಂಗೀತದ ಸ್ಪರ್ಶ ಕೊಟ್ಟ ಪ್ರಥಮ ಕೀರ್ತನಾಕಾರರು. ದಾಸ ಸಾಹಿತ್ಯ, ಕರ್ನಾಟಕ ಸಂಸ್ಕೃತಿಗೆ ಪುರಂದರರ ಕೊಡುಗೆ ಅಪಾರ. ಹರಿಗುರುಸ್ಮರಣೆ, ಸ್ತುತಿ, ಅಂತರಂಗ ವೇದನೆ, ಕೃಷ್ಣಲೀಲೆ, ಸಮಾಜ ವಿಮರ್ಶೆ ಸಮಾಜ ಬೋಧನೆಗಳನ್ನು ಇವರ ಸಾಹಿತ್ಯದಲ್ಲಿ ಕಾಣಬಹುದು. 'ಪುರಂದರವಿಠಲ' ಕೀರ್ತನೆಗಳ ಅಂಕಿತ. ಪುರಂದರ ದಾಸರ ಸಮಕಾಲೀನ ಸಂತ, ಕವಿ ಕನಕದಾಸ ಕೀರ್ತನಕಾರ. 'ಆದಿ ಕೇಶವ' ಅಂಕಿತ ನಾಮ. ನಳಚರಿತ್ರೆ, ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ಹರಿಭಕ್ತಿಸಾರ ಮುಂತಾದ ಕಾವ್ಯಗಳನ್ನು ಸೃಜಿಸಿದ್ದಾರೆ. ಜನತೆಯ ಮೌಢ್ಯ, ಕಂದಾಚಾರ, ಪೊಳ್ಳು ನಂಬಿಕೆ, ವರ್ಣ ವ್ಯವಸ್ಥೆಯನ್ನು ಖಂಡಿಸಿರುವುದಲ್ಲದೆ, ದೈವಭಕ್ತಿ, ಜೀವನ ದರ್ಶನ, ಸಮಾಜ ವಿಮರ್ಶೆ, ಲೋಕಾನುಭವಗಳು ಕಾವ್ಯಾತ್ಮಕವಾಗಿ ಹೊರಹೊಮ್ಮಿರುವುದನ್ನು ಕನಕದಾಸರ ಸಾಹಿತ್ಯದಲ್ಲಿ ಕಾಣಬಹುದು.

**ಸಿಂಗರಾರ್ಯ ಮತ್ತು ಸಂಚಿಹೊನ್ನಮ್ಮ:** 'ಮಿತ್ರವಿಂದಾ ಗೋವಿಂದ' ಸಿಂಗರಾರ್ಯನ ಕನ್ನಡದ ಪ್ರಥಮ ನಾಟಕ. ಶ್ರೀಹರ್ಷನ 'ರತ್ನಾವಳಿ' ಸಂಸ್ಕೃತ ನಾಟಕದ ಭಾಷಾಂತರವಾಗಿದೆ. ನಾಟಕದ ಭಾಷೆ ಹಳಗನ್ನಡದಲ್ಲಿದೆ. ನಾಟಕದ ಕೇಂದ್ರ ಕೃಷ್ಣಕಥೆ. ಸಿಂಗರಾರ್ಯನು ತನ್ನ ನಾಟಕದಲ್ಲಿ ಗುಣಾತಿಶಯವನ್ನು ತೊರದಿದ್ದರೂ ತನ್ನ ಶಿಷ್ಯೆಯಾದ ಹೊನ್ನಮ್ಮಳಿಗೆ ಯೋಗ್ಯ ಸಂಸ್ಕಾರ ಕೊಟ್ಟು 'ಹದಿಬದೆಯ ಧರ್ಮ' ಕೃತಿ ಬರೆಯಿಸಿದನು. ಗುರುಶಿಷ್ಯರು ಇಬ್ಬರು ಮೈಸೂರಿನ ದೊರೆ ಚಿಕದೇವರಾಜ ಒಡೆಯರ ಆಸ್ಥಾನದಲ್ಲಿದ್ದರು ಹೊನ್ನಮ್ಮ ತನ್ನ ಕಾವ್ಯದಲ್ಲಿ ಪವಿತ್ರತಾ ಧರ್ಮವನ್ನು ಸರಳ ಸುಂದರವಾಗಿ ನಿರೂಪಿಸಿದ್ದಾಳೆ. ಕೃತಿ ಸಂಸಾರ ಧರ್ಮದ ಕೈಪಿಡಿಯೂ, ಪವಿತ್ರತಾ ಧರ್ಮದ ಸುಖಮಯ ದಾಂಪತ್ಯದ ಸಿರಿಗನ್ನಡಿಯೂ ಆಗಿದೆ. ಹೆಣ್ಣನ್ನು ಅಸಡ್ಡೆಯಿಂದ ನೋಡುವವರಿಗೆ "ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣುಕಾಣದ ಗಾವಿಲರು" ಎಂದು ಪುರುಷ ಸಮಾಜವನ್ನು ಪ್ರಶ್ನಿಸಿದ್ದಾಳೆ.

**ಸರ್ವಜ್ಞ:** ಕುಮಾರವ್ಯಾಸ ಯುಗದ ವ್ಯವಹಾರ ಜ್ಞಾನ – ವಿವೇಕಗಳ ಮೂರ್ತಿಯಾಗಿ ಬಾಳಿದವನು ಸರ್ವಜ್ಞ, ಈತನ ತ್ರಿಪದಿಗಳಲ್ಲಿ ಕಥೆ ಇಲ್ಲ, ವರ್ಣನೆಯಿಲ್ಲ, ಆದರೆ ಸಮಗ್ರ ಜೀವನ ಕಥೆ ಇಲ್ಲವೇ ಜೀವನ ಧರ್ಮ ಅವುಗಳಲ್ಲಿ ರೂಪುಗೊಂಡಿದೆ. ಬರೀ ನೀತಿ ಕಾವ್ಯ ಮಾತ್ರವಲ್ಲ ಅನುಭವ, ತತ್ವ ಭಕ್ತಿ ಎಲ್ಲವೂ ಇರುವ ಜೀವನ ಸತ್ಯ ತ್ರಿಪದಿಗಳಾಗಿವೆ. ಸರ್ವಜ್ಞನ ವಚನಗಳು ಜನತೆಯ

ಜ್ಞಾನಕೋಶವಾಗಿದೆ, ಸ್ಫೂರ್ತಿ ವಾಕ್ಯಗಳಾಗಿವೆ ಗಾದೆ ಮಾತುಗಳಾಗಿವೆ, ಕನ್ನಡ ಸಾಹಿತ್ಯದ ದೇಸಿತತ್ವವು ಸರ್ವಜ್ಞನಲ್ಲಿ ಸಾರ್ಥಕ್ಯವನ್ನು ಪಡೆದಿದೆ.

**ಮುದ್ದಣ (ಕಾಲ 1896 – 1901):** ಮುದ್ದಣ ಕಾವ್ಯನಾಮದಿಂದ ಕೃತಿ ರಚಿಸಿ ಪ್ರಾಚೀನ ಕನ್ನಡ, ಆಧುನಿಕ ಕನ್ನಡ ಸಾಹಿತ್ಯವನ್ನು ರಸ ಸೇತುವೆಯನ್ನು ನಿರ್ಮಿಸಿದ ನಂದಳಿಕೆಯ ಲಕ್ಷ್ಮೀನಾರಾಯಣಪ್ಪ. ಹೊಸಗನ್ನಡ ಕಾವ್ಯಕ್ಕೆ ನಾಂದಿ ಹಾಡಿದ ಅರುಣೋದಯ ಮುಂಗೋಳಿ, ಅದ್ಭುತ ರಾಮಾಯಣ, ರಾಮ ಪಟ್ಟಾಭೀಷೇಕ, ರಾಮಾಶ್ವಮೇಧ ಎಂಬ ಗ್ರಂಥಗಳನ್ನು, ರತ್ನಾವತೀಕಲ್ಯಾಣ, ಕುಮಾರ ವಿಜಯ ಎಂಬ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾನೆ. ರಾಮಾಶ್ವಮೇಧ ಗದ್ಯಕಾವ್ಯಕಥೆಯ ಆರಂಭದಲ್ಲಿ ಬರುವ ಮಳೆಗಾಲದ ವರ್ಣನೆ ಮುದ್ದಣ ಮನೋರಮೆಯರ ಸಂವಾದ ವಿನೂತನವಾಗಿದೆ. ಇಡೀ ಕನ್ನಡ ಸಾಹಿತ್ಯದಲ್ಲಿ ಗಂಡು ಹೆಣ್ಣಿನ ಸಂವಾದ ಇದೇ ಮೊಟ್ಟಮೊದಲಾಗಿದೆ. 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂದಿದ್ದಾರೆ ಎಸ್.ವಿ.ರಂಗಣ್ಣ ಅವರು. ಕುಮಾರವ್ಯಾಸ ಯುಗದ ಇನ್ನೂ ಪ್ರಮುಖ ಕವಿಗಳೆಂದರೆ, ಸೊಬಗಿನ ಸೋನೆಯ ದೇವರಾಜ, ಜೀವಂಧರ ಚರಿತೆಯ ಭಾಸ್ಕರ, ಶಿವತತ್ವ ಚಿಂತಾಮಣಿಯ ಲಕ್ಕಣ್ಣ ದಂಡೇಶ, ಮಗ್ಗೆಯ ಮಾಯಿದೇವ, ಗುರುಬಸವ, ಚಂದ್ರಕವಿ, ಕಲ್ಯಾಣ ಕೀರ್ತಿ, ವಿಜಯಣ್ಣ, ಬೊಮ್ಮರಸ, ತೋಂಟದಸಿದ್ಧೇಶ್ವರ, ಗುಬ್ಬಿಯಮಲ್ಲಣ್ಣ, ಸ್ವತಂತ್ರ ಸಿದ್ಧಲಿಂಗೇಶ್ವರ, ತೆರಕಣಾಂಬಿ ಬೊಮ್ಮರಸ, ತ್ರಿಪುರ ದಹನ ಸಾಂಗತ್ಯದ ಶಿಶುಮಾಯಣ, ಆದ್ಯ ಶ್ರೀಪಾದರಾಯ, ನಿಜಗುಣಶಿವಯೋಗಿ, ಸುರಂಗ ಕವಿ, ತಿಮ್ಮಣ್ಣಕವಿ, ಗುಬ್ಬಿಯ ಮಲ್ಲಣ್ಣಾರ್ಯ, ನಂಜುಂಡಕವಿ, ವ್ಯಾಸರಾಯ, ಭಾಗವತ ಬರೆದ ಚಾಟುವಿಠಲನಾಥ, ಸಾಳ್ವ, ಭರತೇಶ ವೈಭವದ ರತ್ನಾಕರವರ್ಣಿ, ವಾದಿರಾಜ, ವಿರೂಪಾಕ್ಷ ಪಂಡಿತ, ಭಟ್ಟಾಕಳಂಕ, ಗೋವಿಂದವೈದ್ಯ, ನಾಗರಸ, ಚಿಕದೇವರಾಜ, ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಮಹಲಿಂಗರಂಗ, ಹೆಳವನಕಟ್ಟೆ ಗಿರಿಯಮ್ಮ, ಲಿಂಗಣ್ಣ, ಜಗನ್ನಾಥದಾಸ, ದೇವಚಂದ್ರ, ಮುಮ್ಮಡಿ ಕೃಷ್ಣರಾಜ, ಕೆಂಪುನಾರಾಯಣ, ಅಳಿಯ ಲಿಂಗರಾಜ ಮುಂತಾದ ಮೇಲ್ಕಂಡ ಎಲ್ಲಾ ಕವಿಗಳ ಸಾಹಿತ್ಯ, ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಒಂದಲ್ಲ ಒಂದು ರೀತಿ ಬೆಳಕು ಚೆಲ್ಲುತ್ತದೆ.

**ಹೊಸಗನ್ನಡ/ಆಧುನಿಕ ಕನ್ನಡ ಸಾಹಿತ್ಯ ಬೆಳವಣಿಗೆಯ ಕಿರು ನೋಟ:** ಈ ಸಾಹಿತ್ಯ ಬೆಳವಣಿಗೆಯನ್ನು ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ, ನವ್ಯೋತ್ತರ ಸಾಹಿತ್ಯಗಳೆಂಬ ಕಾಲಘಟ್ಟಗಳಲ್ಲಿ ಗುರುತಿಸಲಾಗುತ್ತದೆ. ಇಂಗ್ಲಿಷ್ "ರೊಮ್ಯಾಂಟಿಸಮ್" ಪದಕ್ಕೆ ಕನ್ನಡದಲ್ಲಿ ನವೋದಯ ಎಂದು ಸಂವಾದಿಯಾಗಿ ಬಳಸಲಾಗುತ್ತಿದೆ. ವಸಾಹತುಶಾಹಿ ಸಂಸ್ಕೃತಿಯ ಪ್ರವೇಶದಿಂದ ವಿದ್ಯಾಭ್ಯಾಸ, ಮುದ್ರಣ, ಹೊಸಬಗೆಯ ಶಿಕ್ಷಣ ಇಂಗ್ಲೀಷ್, ವಿಜ್ಞಾನ, ಕೈಗಾರಿಕೀಕರಣ ಮುಂತಾದ ಪ್ರಭಾವದಿಂದ ನವೋದಯದ ಸಾಹಿತ್ಯ ಒಂದು ವಿಭಿನ್ನ ಮನೋಧರ್ಮವಾಗಿ ಅಸ್ತಿತ್ವವನ್ನು ಪಡೆದುಕೊಂಡಿತು. ಇಲ್ಲಿ ಭಾವುಕತೆ, ಉತ್ಸುಕತೆ, ಸಂಮೃದ್ಧಿ ನಿಸರ್ಗಾರಾಧನೆಯ ಲಕ್ಷಣಗಳು ಹೆಚ್ಚಾಗಿ ಕಂಡುಬಂದವು. ರಾಷ್ಟ್ರಭಕ್ತಿ, ನಾಡುನುಡಿಯ ಪ್ರೇಮ, ಸ್ವಾತಂತ್ರ್ಯ ಚಳುವಳಿ, ಗಾಂಧೀವಾದ, ವರ್ತಮಾನದ ತಲ್ಲಣಗಳು ನಿಸರ್ಗ ಕುರಿತ ಚಿಂತನೆಗಳನ್ನು ನವೋದಯ ಸಾಹಿತ್ಯ ಕೃಷಿಯಲ್ಲಿ ಕಾಣಬಹುದಾಗಿದ್ದು ಮೈಸೂರು, ಧಾರವಾಡ, ಮಂಗಳೂರು ಪ್ರಾದೇಶಿಕ ವಲಯದಲ್ಲಿ ಕಾಣಿಸಿಕೊಂಡಿತು. 1921ರಲ್ಲಿ ಬಿ.ಎಂ.ಶ್ರೀ ಅವರ "ಇಂಗ್ಲೀಷ್ ಗೀತೆಗಳು" ಪ್ರಕಟಗೊಂಡು ನವೋದಯದ ಹೆಬ್ಬಾಗಿಲು ಎಂದು ಪ್ರಶಂಸೆ ಪಡೆಯಿತು. ಬಿ.ಎಂ.ಶ್ರೀ ನವೋದಯ ಸಾಹಿತ್ಯ ಹರಿಕಾರ

ಹೆಸರಿಗೆ ಬಜನರಾದರು. 1911ರಲ್ಲಿ ಗೋವಿಂದ ಪೈ ಅವರು ಪ್ರಾಸಬಿಟ್ಟು ಕವಿತೆ ರಚಿಸಿ ನವೋದಯ ಹೊಸ ಸಂವೇದನೆ, ಅಭಿವೃದ್ಧಿಗೆ ಸ್ಪಷ್ಟ ನಿದರ್ಶನವಾದರು. ಆರಂಭದಲ್ಲಿ ಎಂ.ಎಸ್.ಪುಟ್ಟಣ್ಣ, ಬಸವಪ್ಪ ಶಾಸ್ತ್ರಿ, ಚುರುಮುರಿ ಶೇಷಗಿರಿರಾಯರು, ಗುಂಡೋ ಕೃಷ್ಣ, ಎಂ.ಎಲ್. ಶ್ರೀಕಂಠೇಶೇಗೌಡ, ಎಸ್.ಜಿ.ನರಸಿಂಚಾರ್ಯ, ಶಾಂತಕವಿ, ಡೆಪ್ಯೂಟಿ ಚೆನ್ನಬಸಪ್ಪ, ವೆಂಕಟರಂಗೋಕಟ್ಟಿ, ಧೋಡೋ ನರಸಿಂಹ, ಗುಲ್ವಾಡಿ ವೆಂಕಟರಾಯ, ಬೆನಗಲ್ ರಾಮರಾವ್, ಪಂಜೇ ಮಂಗೇಶರಾಯ ಮುಂತಾದವರು ತಮ್ಮ ಕಾದಂಬರಿ, ಕಾವ್ಯ, ನಾಟಕಗಳನ್ನು ಅನುವಾದಗಳ ಮೂಲಕ ಕೆಲವೊಮ್ಮೆ ಸ್ವತಂತ್ರವಾಗಿ ರಚಿಸಿ ನವೋದಯ ಸಾಹಿತ್ಯ ಕೇತ್ರದ ಹೊಸಬದಲಾವಣೆಗೆ ಚಾಲನೆ ನೀಡಿದರು. ನಂತರದಲ್ಲಿ ಡಿ.ವಿ.ಜಿ, ಕುವೆಂಪು, ಮಾಸ್ತಿ, ಬೇಂದ್ರೆ, ಮಧುರಚೆನ್ನ, ವಿ.ಸೀತಾರಾಮಯ್ಯ, ಪುತಿನ, ಕೆ.ಎಸ್.ನರಸಿಂಹಸ್ವಾಮಿ, ಟಿ.ಪಿ.ಕೈಲಾಸಂ, ಶಿವರಾಂ ಕಾರಂತ, ಕೊಡಗಿನ ಗೌರಮ್ಮ, ಆನಂದಕಂದ, ಎಸ್.ವಿ.ಪರಮೇಶ್ವರ ಭಟ್ಟ, ಜಿ.ಎಸ್.ಶಿವರುದ್ರಪ್ಪ, ಶ್ರೀರಂಗ, ಮುಂತಾದವರು ನವೋದಯ ಸಾಹಿತ್ಯಕ್ಕೆ ಹೊಸತವನ್ನು ತುಂಬಿದರು. ಕವಿತೆ, ಕಾದಂಬರಿ, ಸಣ್ಣಕಥೆ, ಪ್ರಬಂಧ, ವಿಮರ್ಶೆ, ನಾಟಕ ಮುಂತಾದ ಹೊಸ ಸಾಹಿತ್ಯ ಪ್ರಕಾರಗಳಲ್ಲಿ ಪರಿಣಾಮಕಾರಿ ಸಾಹಿತ್ಯ ಕೃಷಿ ನಡೆಯಿತು.

**ಪ್ರಗತಿಶೀಲ ಸಾಹಿತ್ಯ:** ಸಾಮಾಜಿಕ ನ್ಯಾಯ ದೊರೆಯಬೇಕಾದರೆ ಸಾಮಾಜಿಕ ವ್ಯವಸ್ಥೆ ಬದಲಾಗಬೇಕು ಎಂಬುದು ಪ್ರಗತಿಶೀಲರ ಧೊರಣೆಯಾಗಿದ್ದು, ಮಾರ್ಕ್ಸ್‌ವಾದದ ದಟ್ಟ ಪ್ರೇರಣೆ ಪ್ರಭಾವವನ್ನು ಪಡೆದುಕೊಂಡಿತು. ಅನಕೃ ಪ್ರಗತಿಶೀಲ ಸಾಹಿತ್ಯದ ಹರಿಕಾರರಾಗಿದ್ದು 1943ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ಕನ್ನಡ ಪ್ರಗತಿಶೀಲ ಸಾಹಿತ್ಯ ಸಮ್ಮೇಳನ ಇವರ ಅಧ್ಯಕ್ಷತೆಯಲ್ಲಿ ಜರುಗಿತು. "ಕಲೆಗಾಗಿ ಕಲೆಯಲ್ಲ ಮಾನವ ಬದುಕಿಗಾಗಿ ಕಲೆ" ಇದರ ಉದ್ದೇಶವಾಗಿತ್ತು, ಪ್ರಗತಿಶೀಲ ಸಾಹಿತ್ಯ, ಸಮತಾವಾದ, ವಾಸ್ತವವಾದ ಹಾಗೂ ಉದಾರವಾದದ ಮಾನವೀಯ ಚಿಂತನೆಗಳ ಮುಖೇನ ಗುರುತಿಸಿಕೊಂಡಿತು. ಸಮಾಜದ ಸಂಕೀರ್ಣತೆಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಸಾಹಿತ್ಯ ರಚನೆ ಪ್ರಗತಿಶೀಲ ಸಾಹಿತ್ಯದ ಪರಮ ಗುರಿಯಾಗಿತ್ತು. ವರ್ಣ–ಜಾತಿ–ವರ್ಗ ಸಂಘರ್ಷ, ದೀನ–ದಲಿತರ ಶೋಷಣೆ, ಅಸ್ಪೃಶ್ಯತೆ, ಮಹಿಳಾ ಶೋಷಣೆ, ಕೂಲಿ ಕಾರ್ಮಿಕರ ಸಮಸ್ಯೆ, ಮೋಸ, ದಬ್ಬಾಳಿಕೆ, ಅನ್ಯಾಯ, ಅಸಮಾನತೆ, ಆರ್ಥಿಕ & ಸಾಮಾಜಿಕ ಅಸಮತೋಲನಕ್ಕೆ ಹೊಸ ಆಯಾಮವನ್ನು ಪ್ರಗತಿಶೀಲ ಸಾಹಿತ್ಯ ನೀಡಿತು. ತಾ.ರಾ.ಸು, ಅರ್ಚಕ ವೆಂಕಟೇಶ, ಬಸವರಾಜ ಕಟ್ಟಿಮನಿ, ನಿರಂಜನ ಮುಂತಾದವರು ನಾಡಿನುದ್ದಕ್ಕೂ ಸಂಚರಿಸಿ, ಸಂಘಟನೆಯನ್ನು ಬಲಪಡಿಸಿದರು, ಹೆಸರಿಸಬೇಕಾದ ಕೃತಿಕರ್ತೃಗಳು, ಕಾದಂಬರಿ ಸಾರ್ವಭೌಮರೆಂದೆ ಹೆಸರಾದ, ಅ.ನ.ಕೃ ಅವರ ಜೀವನಯಾತ್ರೆ, ಸಂಜೆಗತ್ತಲು, ಕಬ್ಬಿಣದಕಾಗೆ, ನಗ್ನಸತ್ಯ, ಶನಿಸಂತಾನ ಮುಂತಾದ ಕಾದಂಬರಿಗಳು, ತ.ರಾ.ಸು ಅವರ ಮುಂಜಾವಿನಿಂದ ಮುಂಜಾವು, ಕಟ್ಟೀಮನಿ ಅವರ ಜರತಾರಿ ಜಗದ್ಗುರು ಮೋಹದ ಬಲೆ, ಅರ್ಚಕ ವೆಂಕಟೇಶರ ಅಸ್ಥಿ ಪಂಜರ, ಬೀದಿಗೆ ಬಿದ್ದವಳು ಚದುರಂಗರ ಉಯ್ಯಾಲೆ ಮೊದಲಾದವು ಈ ಕಾಲಘಟ್ಟದಲ್ಲಿ ರಚನೆಯಾದ ಕಾದಂಬರಿಗಳು. ಕರ್ನಾಟಕದಲ್ಲಿ ಒಂದು ಓದುವ ವರ್ಗವನ್ನೇ ಸೃಷ್ಟಿಮಾಡಿತು. ವಿಶೇಷವಾಗಿ ಮಹಿಳೆಯರಿಗೆ ಸಾಹಿತ್ಯಾಭಿರುಚಿಯನ್ನು ಮೂಡಿಸಿತು. ಕಥಾ ಸಾಹಿತ್ಯದಲ್ಲಿ ಭಾರತೀಪ್ರಿಯರ "ಮೋಚಿ", ನಿರಂಜನರ ಶೂನ್ಯ, ಕೊನೆ ಗಿರಾಕಿ, ನಾವು ಮನುಷ್ಯರು, ಕಟ್ಟಿಮನಿ ಅವರ ಗಿರಿಜಾಕಂಡ ಸಿನಿಮಾ, ಚದುರಂಗರ ಶವದಮನೆ, ಬೆಸಗರಹಳ್ಳಿ ರಾಮಣ್ಣರ ಗಾಂಧಿ, ತೇಜಸ್ವಿಯವರ ತಬರನಕಥೆ,

ಲಂಕೇಶರ ರೊಟ್ಟಿ, ತರಾಸುಅವರ 000, ಶ್ರೀರಂಗರ ಹರಿಜನ್ವಾರ, ಶೋಕಚಕ್ರ, ಕೋ.ಚನ್ನಬಸಪ್ಪನವರ ನಮ್ಮೂರ ದೀಪ, ಬಂಗಾರದ ಉರುಲು, ಮುಂತಾದ ಕಥೆಗಳು ಮೂಡಿಬಂದವು ಪ್ರಗತಿಶಿಲ ಬಹುಮಟ್ಟಿಗೆ ಕಥೆ, ಕಾದಂಬರಿಗಳಿಗೆ ಸೀಮಿತವಾಯಿತು. ಶೊಷಿತರ ಅನುಕಂಪ ಮಾತ್ರ ವ್ಯಕ್ತವಾಯಿತು, ಭಾವುಕತೆ ಅಬ್ಬರದಲ್ಲಿ ಕಲಾತ್ಮಕತೆ ಹಿಂದೆ ಸರಿಯಿತು.

**ನವ್ಯ ಸಾಹಿತ್ಯ:** ಆಂಗ್ಲ ಸಾಹಿತ್ಯದ **'MODERNISM'**ಗೆ ಸಂವಾದಿಯಾದುದು, 1950ರ ಮುಂಬಯಿ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕ ಗೋಷ್ಠಿಯಲ್ಲಿ ವಿ.ಕೃ.ಗೋಕಾರು **"**ಸಾಹಿತ್ಯ ಹಾಗೂ ನವ್ಯತೆ**"** ಎಂಬ ಉಪನ್ಯಾಸದಲ್ಲಿ ನವ್ಯಕಾವ್ಯದ ಹೊಸಮಾರ್ಗವನ್ನು ವಿವರಿಸುತ್ತಾರೆ. ಗೋಕಾಕರ ಸಮುದ್ರಗೀತೆಗಳಲ್ಲಿ ನವ್ಯದ ಕೆಲವು ಲಕ್ಷಣ ಗೋಚರಿಸುತ್ತದೆ. ನಂತರದಲ್ಲಿ ಪರಿಣಾಮಕಾರಿ ನೆಲೆಯಲ್ಲಿ ನವ್ಯ ಸಾಹಿತ್ಯದಲ್ಲಿ ಕೃಷಿ ಮಾಡಿದವರು. ಎಂ ಗೋಪಾಲಕೃಷ್ಣ ಅಡಿಗರು ನವ್ಯ ಸಾಹಿತ್ಯದ ಯುಗ ಪ್ರವರ್ತಕ ಎಂದೆಸರಾದರು. ಈ ಪಂಥ ಪಾಶ್ಚಾತ್ಯದ ಅಸ್ತಿತ್ವವಾದ, ಅಸಂಗತವಾದ, ಸಂಕೇತವಾದ, ಪ್ರತಿಮಾವಾದ, ಮನೋವಿಶ್ಲೇಷಣಾತ್ಮಕವಾದಗಳನ್ನು ರೂಢಿಸಿಕೊಂಡು ಬೆಳೆಯಿತು. ಅನಾಥ ಪ್ರಜ್ಞೆ, ಪರಕೀಯತೆ, ಸಿನಿಕಥನ ಮೊದಲಾದ ಆಧುನಿಕ ಬದುಕಿನ ಒತ್ತಡಗಳ ಶೋಧನೆಗಳಿಗಾಗಿ ರಚನೆಗೊಂಡಿತು. ಹಾಗಾಗಿ ವ್ಯಂಗ್ಯ ಅಥವಾ ವಿಡಂಬನೆ, ಪ್ರತಿಭಟನೆ, ಮೌಲ್ಯಗಳ ಪುನರ್ ವಿಮರ್ಶೆ, ಬುದ್ಧಿ ಪ್ರಾಧಾನ್ಯತೆ, ದೇಸೀಯತೆ ಅಥವಾ ಮಣ್ಣಿನಗುಣ, ವೈಜ್ಞಾನಿಕ ಶೋಧನೆ, ವ್ಯಕ್ತಿನಿಷ್ಠತೆ ಅಥವಾ ವೈಯಕ್ತಿಕತೆ, ವಿಷಾದ ಮತ್ತು ಭ್ರಮನಿರಸ, ಪ್ರಾಮಾಣಿಕ ಅಭಿವ್ಯಕ್ತಿ, ಪ್ರಯೋಗಶೀಲತೆ, ಛಂದಸ್ಸಿನ ಸಡಿಲತೆ, ಸಂಕೇತ, ಪ್ರತಿಮೆಗಳ ಬಳಕೆ, ಭಾಷಾಸಂಕೀರ್ಣತೆ ಮತ್ತು ಏಕಾಕಿತನ, ಅನಾಥಪ್ರಜ್ಞೆ ಮೊದಲಾದ ವಾಸ್ತವ ಸಂವೇದನೆಗಳ ತೀಕ್ಷ್ಣತೆಗಳು ನವ್ಯಕಾವ್ಯದ ಲಕ್ಷಣಗಳಾಗಿ ಕಂಡುಬರುತ್ತವೆ. ಬಿ.ಸಿರಾಮಚಂದ್ರಶರ್ಮ, ಚಂದ್ರಶೇಖರ ಕಂಬಾರ, ಕೆ.ಎಸ್.ನಿಸಾರ್ ಅಹಮದ್, ಹೆಚ್.ಎಂ.ಚನ್ನಯ್ಯ, ಯಶವಂತ ಚಿತ್ತಾಲ, ಸು.ರಂ.ಎಕ್ಕುಂಡಿ, ಯು.ಆರ್.ಅನಂತಮೂರ್ತಿ, ಲಂಕೇಶ, ಗಿರೀಶ ಕಾರ್ನಾಡ್, ಶಾಂತಿನಾಥ ದೇಸಾಯಿ, ಪೂರ್ಣಚಂದ್ರ ತೇಜಸ್ವಿ, ಕುರ್ತುಕೋಟಿ, ಗಿರಿಡ್ಡಿ, ಜಿ.ಹೆಚ್.ನಾಯಕ್ ಮುಂತಾದವರುಗಳು ನವ್ಯ ಪ್ರಮುಖರು. ನವ್ಯ ಸಾಹಿತ್ಯ ಕಾವ್ಯವನ್ನು ಚಿಂತನೆಯ ನೆಲೆಗೆ ಹಚ್ಚಿ ವಾಸ್ತವಕ್ಕೆ ಪ್ರಾಧಾನ್ಯತೆ ನೀಡಿತು. ವಸ್ತು, ವಿಷಯ, ಭಾಷೆಯನ್ನು ಸಂಕೀರ್ಣಗೊಳಿಸಿತು. ಕನ್ನಡ ನುಡಿಯಲ್ಲಿ ಹೊಸನಡಿಗೆ ತೋರಿಸಲು ಸಾಧ್ಯವಾಯಿತು, ಆದರೆ ನವ್ಯ ಸಾಹಿತ್ಯ ಬರಿಯ ಬೌದ್ಧಿಕ ಕಸರತ್ತಾಗಿ ಬದುಕಿನ ಸ್ಪರ್ಶವನ್ನೇ ಪಡೆಯಲಿಲ್ಲ ಎನ್ನುವುದು ನವ್ಯ ಪಂಥದ ಮೇಲಿರುವ ಆರೋಪ.

**ದಲಿತ ಬಂಡಾಯ ಸಾಹಿತ್ಯ:** ಕರ್ನಾಟಕದ ದಲಿತ ಸಾಹಿತ್ಯದ ಹುಟ್ಟಿಗೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್, ಆಂಧ್ರದ ವಿರಸಂ, ಕರ್ನಾಟಕದ ಬೂಸಾ ಪ್ರಕರಣ ಮುಂತಾದವು ನಿಮಿತ್ತ. ಮುಖ್ಯವಾಗಿ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ರೂಪುಗೊಂಡ ದಲಿತ ಸಾಹಿತ್ಯವನ್ನು ಮೊದಲಿಗೆ ದೇವನೂರು ಮಹಾದೇವರ **"**ದ್ಯಾವನೂರು**"** ಕಥಾಸಂಕಲನದಿಂದ ಗುರುತಿಸಲಾಗುತ್ತಿದೆ. ಸ್ವಾತಂತ್ರ್ಯ ನಂತರ ಮೀಸಲಾತಿ ಸೌಲಭ್ಯಗಳ ಅನುಕೂಲತೆಯಿಂದ ಶಿಕ್ಷಣ ಪಡೆದು ತಮ್ಮ ಕೇರಿಯ, ಪ್ರಾದೇಶಿಕ ಭಾಷೆಯಲ್ಲಿ ತಮ್ಮ ಸಹಜ ಬದುಕಿನ ಅವಮಾನ, ನೋವು, ದೌರ್ಜನ್ಯಗಳ ಅನುಭವಗಳನ್ನು ಸ್ಪಷ್ಟವಾಗಿ ತಮ್ಮ ಬರಹಗಳ ಮೂಲಕ ದಾಖಲಿಸಿತು. ಡಾ.ಸಿದ್ಧಲಿಂಗಯ್ಯನವರು ತಮ್ಮ ಬರಹದ ಮೂಲಕ

ಪುರೋಹಿತ ಶಾಹಿಯನ್ನು ಪಟ್ಟಭದ್ರ ಹಿತಾಶಕ್ತಿಯ ವ್ಯವಸ್ಥೆಯನ್ನು ಧಿಕ್ಕರಿಸಿದರು. ಇದೇ ಸಂದರ್ಭದಲ್ಲಿ 'ದಸಂಸ' ರೂಪುಗೊಂಡಿತು. ಮೈಸೂರಿನಲ್ಲಿ 'ಪಂಚಮ' ಪತ್ರಿಕೆ ದಲಿತ ಸಾಹಿತ್ಯದ ಹೊಸ ಆಲೋಚನೆ, ಅಭಿವ್ಯಕ್ತಿಗೆ ವೇದಿಕೆ ರೂಪಿಸಿತು. ಈ ನಿಟ್ಟಿನಲ್ಲಿ ಇಂಧೂದರ ಹೊನ್ನಾಪುರ, ಶಿವಾಜಿ ಗಣೇಶನ್, ರಾಮದೇವರಾಕೆ, ಮನಜ, ಗೋವಿಂದಯ್ಯ, ಮುಳ್ಳೂರು ನಾಗರಾಜು ಪತ್ರಿಕೆಯ ಮುಖೇನ ಬೆಳಕಿಗೆ ಬಂದರು. ಚನ್ನಣ್ಣ ವಾಲಿಕಾರ, ಮೊಗಳ್ಳಿ ಗಣೇಶ್, ಸೋಮಣ್ಣ ಹೊಂಗಳ್ಳಿ, ಅರವಿಂದ ಮಾಲಗತ್ತಿ, ದೇವಯ್ಯ ಅರವೆ, ದ್ವಾರಕನಾಥ್, ಎಲ್.ಹನುಮಂತಯ್ಯ ಮುಂತಾದ ದಲಿತ ಬರಹಗಾರರು ಕಥೆ, ಕಾವ್ಯ, ನಾಟಕ, ಕಾದಂಬರಿ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಬರೆದು ದಲಿತ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.

ಸಮಾಜದ ಪಟ್ಟಭದ್ರ ಹಿತಾಶಕ್ತಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿ ರಚಿಸಿದ ಸಾಹಿತ್ಯವೇ ಬಂಡಾಯ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯವನ್ನು ಒಟ್ಟಾರೆಯಾಗಿ ನವೋತ್ತರ ಸಾಹಿತ್ಯ ಎಂದು ಕರೆಯಲಾಗುತ್ತದೆ. ನವ್ಯದ ವ್ಯಕ್ತಿವಾದಿ ನೆಲೆಗೆ ವಿರುದ್ಧವಾಗಿ ಸಮಾಜಮುಖ ನೆಲೆಯಲ್ಲಿ ನಿಂತು ಅದಕ್ಕೆ ಧ್ವನಿಗೂಡಿಸಿದ್ದು ಈ ಸಾಹಿತ್ಯ ಆರಂಭದಲ್ಲಿ ಸಿಟ್ಟು ಅವಮಾನವನ್ನು ಹೊರಹಾಕುವ ರೋಷಾವೇಷದ ಭಾಷೆಯಲ್ಲಿಯೇ ಅಭಿವ್ಯಕ್ತಗೊಂಡಿತು. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಪಕ್ವವಾಗುತ್ತಾ ಅಸಂಖ್ಯ ಶೂದ್ರ ಸಮುದಾಯದಿಂದ ಮನಕಲಕುವ ರೀತಿಯಲ್ಲಿ ಸಾಹಿತ್ಯ ಬೆಳೆಯಿತು. ಮುಖ್ಯವಾಗಿ ಜಾತಿ, ಲಿಂಗ, ವರ್ಗ ಭಾಷಾ ಬೇಧಗಳನ್ನು ಸಹಿಸುವುದಿಲ್ಲ. ಪುರೋಹಿತಶಾಹಿ, ಬಂಡವಶಾಹಿ, ವಸಾಹತುಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಲು ಹೋರಾಟದ ದಾರಿಹಿಡಿಯಿತು. ಪ್ರಮುಖವಾಗಿ ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ, ಜಂಬಣ್ಣ ಅಮರಚಿಂತ, ರಂಜಾನ್ ದರ್ಗ, ಬೆಸಗರಹಳ್ಳಿ ರಾಮಣ್ಣ, ಬಿ.ಟಿ ಲಲಿತನಾಯಕ್, ಹೆಚ್.ಎಸ್.ಶಿವಪ್ರಕಾಶ್, ಕಾಳೇಗೌಡ ನಾಗವಾರ, ಎಸ್.ಜಿ.ಸಿದ್ಧರಾಮಯ್ಯ, ಕರೀಗೌಡ ಬೀಚನಹಳ್ಳಿ, ಬಾನುಮಸ್ತಾಕ್, ಕೆ.ಎಸ್.ಭಗವಾನ್, ಕುಂ.ವೀರಭದ್ರಪ್ಪ, ರಹಮತ್ ತರೀಕೆರೆ, ಮಲ್ಲಿಕಾ ಘಂಟಿ, ಆರ್.ವಿ.ಭಂಡಾರಿ ಮುತಾದವರು ಬಂಡಾಯ ಸಾಹಿತ್ಯದ ಪ್ರಮುಖರಾಗಿದ್ದಾರೆ. ವ್ಯಕ್ತಿಗೌರವ, ಪ್ರಜಾಪ್ರಭುತ್ವವಾದಿ ನೆಲೆ, ಎಡಪಂಥೀಯ ಆಲೋಚನೆಗಳನ್ನು ಪ್ರಧಾನ ನೆಲೆಯಾಗಿ ವಿರೋಧಿಸುವ ಬಂಡಾಯ ಸಾಹಿತ್ಯ ದಲಿತ ಸಂವೇದನೆ, ಸ್ತ್ರೀ ಸಂವೇದನೆ, ಮುಸ್ಲಿಂ ಸಂವೇದನೆಯನ್ನು ಹುಟ್ಟುಹಾಕಿದೆ. ಬದುಕಿನ ಅಸಮಾನತೆಗಳಾದ ಜಾತಿ, ಅಸ್ಪೃಶ್ಯತೆ, ಧರ್ಮ, ಪ್ರಭುತ್ವ, ಲಿಂಗಬೇಧಗಳನ್ನು ವರ್ಣ ಸಂಘರ್ಷಗಳನ್ನು ಕುರಿತು ಬಂಡಾಯ ಮನುಷ್ಯನ ಅಸ್ತಿತ್ವ ಮತ್ತು ಪ್ರತಿಭಟನೆಯನ್ನು ಏಕಕಾಲಕ್ಕೆ ಪ್ರಕಟಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- ಬೆಟ್ಟೇಗೌಡ ಪಿ. (ಸಂ.). ಆಧುನಿಕ ಕನ್ನಡ ಸಾಹಿತ್ಯ ಪರಿಚಯ ಮತ್ತು ಪಠ್ಯ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ರಾಜಪ್ಪ ದಳವಾಯಿ. (ಸಂ.) ಕನ್ನಡ ಸಾಹಿತ್ಯ ಕೋಶ. ದಳವಾಯಿ ಪ್ರಕಾಶನ, ಬೆಂಗಳೂರು.
- ರಂ. ಶ್ರೀ.ಮುಗಳಿ. ಕನ್ನಡ ಸಾಹಿತ್ಯ ಚರಿತ್ರೆ. ಗೀತಾಬುಕ್ ಹೌಸ್, ಮೈಸೂರು.
- ವೀರಣ್ಣ. ಸಿ. (ಸಂ.). ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ 1, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.